# 4:2-6

# ಬುದ್ಧಿವಾದಗಳು

ಪೌಲನು ಕ್ರೈಸ್ತ ವ್ಯಕ್ತಿಗಳು ಹೇಗೆ ನಡೆದುಕೊಳ್ಳಬೇಕೆಂಬ ಬಗ್ಗೆ ಬರೆದ ಬಳಿಕ (3:5-17), ಆತನು ಸಭೆಯೊಳಗಿನ ವಿವಿಧ ಗುಂಪುಗಳಿಗೆ ಸಲಹಾಸೂಚನೆಗಳನ್ನು ನೀಡುತ್ತಾನೆ (3:18-4:1). ನಂತರ, ಕೊಲೊಸ್ಸೆಯಲ್ಲಿದ್ದ ಇಡೀ ಸಭೆಯನ್ನು ಉದ್ದೇಶಿಸಿ ಮಾತಾಡುತ್ತಾನೆ. ಆತನು ಮುಕ್ತಾಯದಲ್ಲಿ ನೀಡುವ ಹೇಳಿಕೆಗಳಿಂದ ಎರಡು ಪಾಠಗಳನ್ನು ರಚಿಸಬಹುದಾಗಿದೆ: ಕ್ರೈಸ್ತರು ಪ್ರಾರ್ಥನೆಯಂತಹ ಸಕಾರಾತ್ಮಕ ಚಟುವಟಿಕೆಗಳನ್ನು ಅಭ್ಯಾಸ ಮಾಡಿಕೊಳ್ಳತಕ್ಕದ್ದು (4:2-4) ಮತ್ತು ನಾಶನದಲ್ಲಿರುವವರನ್ನು ಕ್ರಿಸ್ತನ ಬಳಿಗೆ ನಡಿಸುವಂತಹ, ವಿಶೇಷ ಸೇವೆಯನ್ನು ಆತನಿಗೋಸ್ಕರ ಮಾಡುವದರಲ್ಲಿ ತೊಡಗಿಸಿಕೊಳ್ಳಬೇಕು (4:5, 6).

## ಪ್ರಾರ್ಥಿಸಬೇಕು, ವಿಶೇಷವಾಗಿ ಪೌಲನಿಗೋಸ್ಕರ (4:2-4)

**2ಪ್ರಾರ್ಥನೆಯನ್ನು ತಪ್ಪದೆಮಾಡುವವರಾಗಿ ಅದರಲ್ಲಿ ಎಚ್ಚರವಾಗಿದ್ದು ದೇವರಿಗೆ ಕೃತಜ್ಞತಾಸ್ತುತಿ ಮಾಡಿರಿ. 3-4ಇದಲ್ಲದೆ ನಮಗೋಸ್ಕರವೂ ಪ್ರಾರ್ಥನೆ ಮಾಡಿರಿ. ಕ್ರಿಸ್ತನ ವಿಷಯದಲ್ಲಿ ದೇವರು ತಿಳಿಯಪಡಿಸಿದ ಸತ್ಯಾರ್ಥವನ್ನು ಪ್ರಸಂಗಿಸುವದಕ್ಕೆ ಆತನು ಅನುಕೂಲವಾದ ಸಂದರ್ಭವನ್ನು ನಮಗೆ ದಯಪಾಲಿಸಿ ನಾನು ಅದನ್ನು ಹೇಳಬೇಕಾದ ರೀತಿಯಲ್ಲಿ ತಿಳಿಸುವಂತೆ ಅನುಗ್ರಹಮಾಡಬೇಕೆಂದು ಬೇಡಿಕೊಳ್ಳಿರಿ; ಆ ಸತ್ಯಾರ್ಥದ ನಿಮಿತ್ತವೇ ನಾನು ಸೆರೆಯಲ್ಲಿದ್ದೇನಲ್ಲಾ.**

### "ಪ್ರಾರ್ಥನೆಯನ್ನು ತಪ್ಪದೆ ಮಾಡುವವರಾಗಿ" (4:2)

ತನ್ನ ಹಲವಾರು ಪತ್ರಿಕೆಗಳ ಅಂತ್ಯದ ಸಮೀಪಕ್ಕೆ ಬಂದಾಗ, ಪೌಲನು ವಾಚಕರಿಗೆ ಪ್ರಾರ್ಥನೆಯಲ್ಲಿ ಸಮಯ ಕಳೆಯುವಂತೆ ಪ್ರೋತ್ಸಾಹಿಸುತ್ತಿದ್ದನು[1] ಮತ್ತು ಅನೇಕ ಸಾರಿ ತನಗೋಸ್ಕರ ಪ್ರಾರ್ಥಿಸುವಂತೆ ಕೇಳಿಕೊಳ್ಳುತ್ತಿದ್ದನು.[2] ಕೊಲೊಸ್ಸೆಯವರಿಗೆ, ಆತನು ಹೀಗೆ ಹೇಳುತ್ತಾನೆ, **ಪ್ರಾರ್ಥನೆಯನ್ನು ತಪ್ಪದೆ ಮಾಡುವವರಾಗಿರಿ** [ποσκαρτερέω, *proskartereō*]. *Proskartereō* ಪದವು ಪ್ರಾರ್ಥನೆಯಲ್ಲಿ ಸ್ಥಿರತೆಯನ್ನು ಕಾಯ್ದುಕೊಳ್ಳುವದರೊಂದಿಗೆ (ನೋಡಿರಿ ಅಪೊಸ್ತಲರ ಕೃತ್ಯಗಳು 1:14; 2:42; 6:4; ರೋಮಾ 12:12) ಅಥವಾ ಬೇರೆ ಚಟುವಟಿಕೆಗಳನ್ನು ನೋಡಿಕೊಳ್ಳುವದಕ್ಕೆ ಸಂಬಂಧ ಹೊಂದಿದೆ (ನೋಡಿರಿ ಮಾರ್ಕ 3:9; ಅಪೊಸ್ತಲರ ಕೃತ್ಯಗಳು 2:46; 8:13; 10:7; ರೋಮಾ 13:6). ಯೇಸು ತನ್ನ ಹಿಂಬಾಲಕರಿಗೆ ಪ್ರಾರ್ಥಿಸುವಂತೆ ಮತ್ತು ಅದನ್ನು ನಿರಾಶರಾಗಿ ಬಿಟ್ಟು

ಬಿಡಬಾರದು ಅಥವಾ ಬಳಲಿ ಹೋಗಬಾರದು ಎಂದು ಬೋಧಿಸಿದನು (ಲೂಕ 11:5-13; 18:1-8).

"ಪ್ರಾರ್ಥನೆ" (προσευχή, *proseuchē*) ಎಂಬ ಪದವನ್ನು ಕೃತಜ್ಞತಾಸ್ತುತಿಗಿಂತಲೂ ವಿಜ್ಞಾಪನೆಗಳನ್ನು ಸೂಚಿಸುವದಕ್ಕೆ ಬಳಸಲಾಗಿರುತ್ತದೆ (ಮಾರ್ಕ 9:29; 12:5; ರೋಮಾ 1:10; 15:30; ಯಾಕೋಬ 5:17). ಕೊಲೊಸ್ಸೆಯಲ್ಲಿದ್ದ ಕ್ರೈಸ್ತರು ಆತನಿಗೋಸ್ಕರ ಮತ್ತು ಆತನ ಸಂಗಡಿಗರಿಗೋಸ್ಕರ ಪ್ರಾರ್ಥನೆ, ಮನವಿಯನ್ನು ಮಾಡಬೇಕಿತ್ತು. ಬೇರೆ ಪತ್ರಿಕೆಗಳಲ್ಲಿ, ಆತನು ಎಡೆಬಿಡದೆ ಪ್ರಾರ್ಥಿಸಬೇಕೆಂದು ಬೇಡಿಕೊಂಡ ಬಳಿಕ ತನಗೋಸ್ಕರವಾಗಿ ಪ್ರಾರ್ಥನೆಯನ್ನು ಮಾಡಿರಿ ಎಂದು ವಿನಂತಿಸಿಕೊಂಡನು (ಎಫೆಸ 6:18-20; 1 ಥೆಸಲೋನಿಕ 5:17, 25). ಆತನು ಪರಸ್ಪರ ಪ್ರಾರ್ಥಿಸಿಕೊಳ್ಳುವಿಕೆಯನ್ನು ಬಹಳ ಪ್ರಾಮುಖ್ಯವೆಂದು ಎಣಿಸಿದ್ದನು, ಯಾಕೆಂದರೆ ಆತನು ಬೇರೆಯವರಿಗೋಸ್ಕರ ನಿರಂತರವಾಗಿ ಪ್ರಾರ್ಥಿಸುತ್ತಿದ್ದನು ಮತ್ತು ತನಗೋಸ್ಕರ ಹಾಗೆಯೇ ಮಾಡುವಂತೆ ಅವರನ್ನು ಕೇಳಿಕೊಂಡನು.

## "ಎಚ್ಚರವಾಗಿದ್ದು ದೇವರಿಗೆ ಕೃತಜ್ಞತಾಸ್ತುತಿ ಮಾಡಿರಿ" (4:2)

ಕೊಲೊಸ್ಸೆಯವರು ಎಚ್ಚೆತ್ತವರಾಗಿ, ಜಾಗರೂಕರಾಗಿ, **ಎಚ್ಚರವಾಗಿದ್ದ**ವರಾಗಿ (γρηγορέω, *grēgoreō*). ಜನರು ತನ್ನ ಪುನರಾಗಮನಕ್ಕಾಗಿ ಸಿದ್ಧರಿರುವಂತಾಗಲು ಎಚ್ಚರದಿಂದ ಇರಬೇಕು ಎಂದು ಯೇಸು ಬೇಡಿಕೊಂಡನು (ಮತ್ತಾಯ 24:42; 25:13; ಲೂಕ 12:37, 39). ಸಹೋದರರು ಶೋಧನೆ ಅಥವಾ ಕೇಡಿಗೆ ಒಳಗಾಗುವದು (1 ಕೊರಿಂಥ 16:13; 1 ಥೆಸಲೋನಿಕ 5:6) ಅಥವಾ ಸುಳ್ಳು ಬೋಧಕರಿಂದ ದಾರಿತಪ್ಪಿಸಲ್ಪಡುವದು (ಅಪೊಸ್ತಲರ ಕೃತ್ಯಗಳು 20:31) ಪೌಲನಿಗೆ ಇಷ್ಟವಿರಲಿಲ್ಲ.[3] ಯೇಸುವು ಪೇತ್ರ, ಯಾಕೋಬ, ಮತ್ತು ಯೋಹಾನರಿಗೆ ಗೆತ್ಸೇಮನೆ ತೋಟದಲ್ಲಿ ಹೀಗೆ ನಿರ್ದೇಶಿಸಿದನು, "ಶೋಧನೆಗೆ ಒಳಗಾಗದಂತೆ ಎಚ್ಚರವಾಗಿದ್ದು ಪ್ರಾರ್ಥಿಸಿರಿ . . ." (ಮತ್ತಾಯ 26:41).

ಎಚ್ಚರವಾಗಿರಬೇಕೆಂಬ ಕಟ್ಟಳೆಯು ನಿರಂತರವಾದ ಅಪಾಯವಿರುವದನ್ನು ಸೂಚಿಸುತ್ತದೆ. ಒಳ್ಳೇದನ್ನು ಬಿಡುವಿಲ್ಲದೆ ಎದುರಿಸುವ ವೈರಿಯಾಗಿರುವ ಸೈತಾನನು, ತನ್ನ ಸುಳ್ಳುಗಳನ್ನು ಮತ್ತು ಮೋಸಕರವಾದ ದಾರಿಗಳನ್ನು ಹೊಂದಿದ್ದಾನೆ (ಯೋಹಾನ 8:44; 2 ಕೊರಿಂಥ 2:11; 11:3). ಕ್ರೈಸ್ತರು ಎಚ್ಚರವಾಗಿರಬೇಕು, ಯಾಕೆಂದರೆ ಆತನು ಆತ್ಮೀಕ, ನೈತಿಕ, ಸಿದ್ಧಾಂತಿಕ, ಶಾರೀರಿಕ, ಸಾಮಾಜಿಕ, ವಿನೋದ, ಮತ್ತು ಆರ್ಥಿಕ ಮಂಡಲಗಳಲ್ಲಿ ವಿನಾಶಕರವಾದ ಶೋಧನೆಗಳನ್ನು ತಂದಿಡುತ್ತಾನೆ. ಯಾವದೇ ಸಮಯದಲ್ಲಿಯಾಗಲಿ ನಾವು ನಮ್ಮ ಭದ್ರತೆಯ ನೆಲೆಯಲ್ಲಿ ಮೈಮರೆತು ಬಿಡುವದಕ್ಕಾಗದು ಮತ್ತು ಆತನ ವಿರುದ್ಧದ ಯುದ್ಧದಲ್ಲಿ ಅಜಾಗರೂಕತೆಯಿಂದಿರುವದಕ್ಕೆ ಸಾಧ್ಯವಿಲ್ಲ. ಕ್ರೈಸ್ತರ ಭದ್ರತೆಗೋಸ್ಕರ ದೇವರು ಆತ್ಮೀಕ ಯುದ್ಧಾಯುಧಗಳನ್ನು ಒದಗಿಸಿದ್ದಾನೆ, ಆದರೆ ನಾವು ಆಯುಧಗಳನ್ನು ಧರಿಸಿಕೊಳ್ಳಬೇಕು ಮತ್ತು ಯುದ್ಧಕ್ಕಾಗಿ ಬಲಗೊಂಡವರಾಗಿ, ಎಚ್ಚರವಾಗಿ, ಮತ್ತು ಪ್ರಾರ್ಥಿಸುವವರಾಗಿ ಇರತಕ್ಕದ್ದು (ಎಫೆಸ 6:10-18).

ಪೌಲನು **ಅದರಲ್ಲಿ** (ἐν αὐτῇ, *en autē*) ಎಂದು ಹೇಳಿದಾಗ, ಆತನು ಪ್ರಾರ್ಥನೆಯನ್ನು ಸೂಚಿಸಿದನು. ಕೊಲೊಸ್ಸೆಯವರಿಗೆ ಎಚ್ಚರವಾಗಿರುವದಕ್ಕೆ ಇದ್ದ ದಾರಿಯು, ನಿದ್ದೆಗೆ ಜಾರುವಂತೆ ಮಾಡಲ್ಪಟ್ಟು ಸೈತಾನನ ಸ್ವಾಧೀನಕ್ಕೊಳಪಟ್ಟ ಲೋಕದ ರೀತಿಯಂತಿರದೇ,

ಅವರು ನಿರಂತರವಾಗಿ ಪ್ರಾರ್ಥಿಸುವದೇ ಆಗಿತ್ತು.

ಪೌಲನು ಕೃತಜ್ಞತಾಸ್ತುತಿ, ಸ್ತೋತ್ರ, ಅಥವಾ ಉಪಕಾರ ಸ್ಮರಣೆ ಮಾಡುವದನ್ನು ಸೂಚಿಸಿದ್ದು ಈ ಬುದ್ಧಿವಾದದೊಂದಿಗೆ ಏಳನೆಯ ಸಾರಿಯಾಗುತ್ತದೆ (ನೋಡಿರಿ 1:3, 12; 2:7; 3:15, 16, 17). ಆತನು ಅನೇಕ ಸಾರಿ ಪ್ರಾರ್ಥನೆಯೊಂದಿಗೆ **ಕೃತಜ್ಞತಾಸ್ತುತಿ**ಯನ್ನು ಸಂಬಂಧಗೊಳಿಸುತ್ತಾನೆ.[4]

## "ಇದಲ್ಲದೆ ನಮಗೋಸ್ಕರವೂ ಪ್ರಾರ್ಥನೆ ಮಾಡಿರಿ . . . ಅನುಕೂಲವಾದ ಸಂದರ್ಭವನ್ನು ನಮಗೆ ದಯಪಾಲಿಸಿ" (4:3-4)

**ಪ್ರಾರ್ಥನೆ ಮಾಡಿರಿ** ಎಂಬುದು ವರ್ತಮಾನ ಕಾಲರೂಪವಾಗಿರುತ್ತದೆ, ಅದು ಸೂಚಿಸುವದೇನೆಂದರೆ ಪೌಲನು ತನಗೋಸ್ಕರ ಹಾಗೂ ತನ್ನ ಸಂಗಡಿಗರಿಗೋಸ್ಕರ ನಿರಂತರವಾಗಿ ಪ್ರಾರ್ಥಿಸಲ್ಪಡುವದನ್ನು ಬಯಸಿದ್ದನು ಎಂಬದೆ. ಆತನು ಸಂಪಾದಕೀಯ ಅರ್ಥದಲ್ಲಿನ "ನನಗೋಸ್ಕರ" ಎಂಬದನ್ನು ಸೂಚಿಸಲು **ನಮಗೋಸ್ಕರ** ಎಂದು ಬಳಸಿರಬಹುದಾಗಿದೆ, ಯಾಕೆಂದರೆ ಆತನು ಮುಂದುವರೆಸಿ ಸಹೋದರರು "ಪ್ರಸಂಗಿಸುವದಕ್ಕೆ . . . ನಮಗೆ" (ವ. 3-4) ಮತ್ತು "ನಾನು ಅದನ್ನು ಹೇಳಬೇಕಾದ ರೀತಿಯಲ್ಲಿ ತಿಳಿಸುವಂತೆ" (ವ. 3-4) ಎಂದು ಬರೆಯುತ್ತಾನೆ. ಆತನು ತನ್ನ ಸಂಗಡಿಗರನ್ನು ಸೂಚಿಸಿ ಸಹ ಹೇಳಿರಬಹುದಾಗಿದೆ ಯಾಕೆಂದರೆ ಬಹುಶಃ ಅವರು ಸಹ ಪ್ರಸಂಗಿಸುತ್ತಿದ್ದರು. ಅದು ನಿಜವಾಗಿದ್ದಲ್ಲಿ, ಆತನು 3-4ರಲ್ಲಿ ಸಾಮಾನ್ಯವಾಗಿ ಅವರನ್ನು ಸೇರಿಸಿದ್ದನು ಮತ್ತು ಬಳಿಕ 3-4ಯಲ್ಲಿ ನಿರ್ದಿಷ್ಟವಾಗಿ ತನಗೋಸ್ಕರ ಪ್ರಾರ್ಥಿಸಬೇಕೆಂದು ಕೇಳಿಕೊಂಡಿದ್ದನು.

ಪೌಲನು ಕೊಲೊಸ್ಸೆಯವರಿಗೆ ಸಾಮಾನ್ಯವಾದವುಗಳಿಗಾಗಿ ಪ್ರಾರ್ಥಿಸುವಂತೆ ಮಾತ್ರವೇ ಕೇಳಲಿಲ್ಲ, ಆದರೆ ಯಾವಾವ ಕಾರ್ಯಗಳಿಗಾಗಿ ಪ್ರಾರ್ಥಿಸಬೇಕೆಂದು ನಿರ್ದಿಷ್ಟವಾದವುಗಳನ್ನು ಹೆಸರಿಸಿದನು. ಆತನು ಸೆರೆಮನೆಯಿಂದ ತನ್ನ ಬಿಡುಗಡೆಯಾಗುವ ಹಾಗೆ ಪ್ರಾರ್ಥಿಸಬೇಕೆಂದು ಅವರನ್ನು ಕೇಳಿಕೊಳ್ಳಲಿಲ್ಲ, ಆದರೆ ಸುವಾರ್ತೆಯನ್ನು ಸಾರುವದಕ್ಕಾಗಿ **ದೇವರು . . . ಒಂದು ಅನುಕೂಲವಾದ ಸಂದರ್ಭವನ್ನು ದಯಪಾಲಿಸುವಂತೆ** ಬೇಡಿಕೊಳ್ಳಿರಿ ಎಂದು ಹೇಳಿದನು. ಆತನು ಈ ಚಿತ್ರಣವನ್ನು ಇತರ ವಾಕ್ಯಭಾಗಗಳಲ್ಲಿ ಸಹ ಬಳಸಿದನು (1 ಕೊರಿಂಥ 16:9; 2 ಕೊರಿಂಥ 2:12). ಒಂದು "ಅನುಕೂಲವಾದ ಸಂದರ್ಭ"ಕ್ಕಾಗಿ ಆತನ ವಿನಂತಿಯು ವಾಕ್ಯವನ್ನು ಸಾರುವದಕ್ಕೆ ಒಂದು ಅವಕಾಶವು ಸಿಕ್ಕುವಂತೆ ಬೇಡಿಕೊಳ್ಳುವದಾಗಿತ್ತು. ಇದು ಒಬ್ಬ ಮನೆಯ ಯಜಮಾನನು ಭೇಟಿ ಕೊಡುವವನನ್ನು ಬಾಗಲು ತೆಗೆದು ಸ್ವಾಗತಿಸುವಂಥದ್ದರ ಒಂದು ಮೌಖಿಕ ಚಿತ್ರವಾಗಿತ್ತು. ಆತನ ಸುವಾರ್ತಾ ಪ್ರಯಾಣಗಳ ವೇಳೆಯಲ್ಲಿ ಯೆಹೂದ್ಯರು ಮತ್ತು ಅನ್ಯಜನರು ಸಹ ಅನೇಕ ಸ್ಥಳಗಳಲ್ಲಿ ಅವರೊಂದಿಗೆ ಸುವಾರ್ತೆಯನ್ನು ಸಾರುವ ಪೌಲನ ಪ್ರಯತ್ನಗಳಿಗೆ ಬಾಗಿಲನ್ನು ಧಡಾರನೆ ಮುಚ್ಚಿಬಿಟ್ಟಿದ್ದರು (ಅಪೊಸ್ತಲರ ಕೃತ್ಯಗಳು 13:50; 14:5, 6; 17:10, 13; 1 ಥೆಸಲೋನಿಕ 2:14-16). ಹೇಗೂ, ಪೌಲನು ಸೆರೆಮನೆಯಲ್ಲಿ "ಯಾವ ಅಡ್ಡಿಯೂ ಇಲ್ಲದೆ ತುಂಬಾ ಧೈರ್ಯದಿಂದ ದೇವರ ರಾಜ್ಯವನ್ನು ಪ್ರಸಿದ್ಧಿಪಡಿಸುತ್ತಾ ಕರ್ತನಾದ ಯೇಸು ಕ್ರಿಸ್ತನ ವಿಷಯವಾಗಿ ಉಪದೇಶಮಾಡುತ್ತಾ" ಇದ್ದಾಗ ಜನರು ಆತನನ್ನು ಆಲಿಸುವದಕ್ಕೆ ಬರುತ್ತಿದ್ದರು ಎಂಬದಾಗಿ ಲೂಕನು ದಾಖಲಿಸುತ್ತಾನೆ (ಅಪೊಸ್ತಲರ ಕೃತ್ಯಗಳು 28:30, 31). ಪೌಲನು ಫಿಲಿಪ್ಪಿಯದವರಿಗೆ ಹೀಗೆ ಬರೆಯುತ್ತಾನೆ,

> ಸಹೋದರರೇ, ನನಗೆ ಸಂಭವಿಸಿರುದು ಸುವಾರ್ತೆಯ ಪ್ರಸಾರಣೆಗೆ ಸಹಾಯವಾಯಿತೆಂದು ನೀವು ತಿಳಿಯಬೇಕೆಂಬದಾಗಿ ಅಪೇಕ್ಷಿಸುತ್ತೇನೆ. ಹೇಗಂದರೆ ನನ್ನ ಬೇಡಿಗಳು ಕ್ರಿಸ್ತನ ನಿಮಿತ್ತವೇ ಎಂದು ಅರಮನೆಯ ಪಹರೆಯವರೆಲ್ಲರಿಗೂ ಮಿಕ್ಕಾದವರಿಗೂ ಪ್ರಸಿದ್ಧವಾಯಿತು. ಇದಲ್ಲದೆ ಸಹೋದರರಲ್ಲಿ ಬಹಳ ಜನರು ನನ್ನ ಬೇಡಿಗಳಿಂದಲೇ ಕರ್ತನಲ್ಲಿ ಭರವಸವುಳ್ಳವರಾಗಿ ದೇವರ ವಾಕ್ಯವನ್ನು ನಿರ್ಭಯದಿಂದ ಹೇಳುವದಕ್ಕೆ ಇನ್ನೂ ವಿಶೇಷ ಧೈರ್ಯಹೊಂದಿದ್ದಾರೆ (ಫಿಲಿಪ್ಪಿ 1:12-14).

ಆತನ ಪ್ರತಿಕೂಲ ಪರಿಸ್ಥಿತಿಗಳೊಳಗೆ ಆತನು ಒಂದು ಅನುಕೂಲತೆಯನ್ನು ಕಂಡುಕೊಂಡನು. ಪೌಲನು ತನ್ನನ್ನು "ಬೇಡಿಯಲ್ಲಿರುವ ರಾಯಭಾರಿ" ಎಂದು ಪರಿಗಣಿಸಿಕೊಂಡಿದ್ದನು (ಎಫೆಸ 6:20).

ಸೆರೆಮನೆಯಲ್ಲಿರುವಾಗ ಪೌಲನು ಬರೆದಿರುವಂಥ ಪತ್ರಿಕೆಗಳು ಪ್ರಪಂಚದ ಮೇಲೆ ಒಂದು ದೊಡ್ಡ ಪರಿಣಾಮವನ್ನು ಬೀರಿದ್ದವು. ಆತನು ತನ್ನ ಮೊದಲ ಸೆರೆವಾಸದ ವೇಳೆ ಎಫೆಸದವರಿಗೆ, ಫಿಲಿಪ್ಪಿಯವರಿಗೆ, ಕೊಲೊಸ್ಸೆಯವರಿಗೆ, ಮತ್ತು ಫಿಲೆಮೋನನಿಗೆ ಪತ್ರಿಕೆಗಳನ್ನು ಬರೆದನು ಮತ್ತು ಎರಡನೆಯ ಸೆರೆವಾಸದ ವೇಳೆಯಲ್ಲಿ 2 ತಿಮೊಥೆ ಪತ್ರಿಕೆಯನ್ನು ಬರೆದನು. ಶತಶತಮಾನಗಳಿಂದ, ಪೌಲನು ಈ ಪತ್ರಿಕೆಗಳ ಮೂಲಕವಾಗಿ ಜನರಿಗೆ ಕ್ರಿಸ್ತನ ದಾರಿಗಳನ್ನು ನಿರಂತರವಾಗಿ ಬೋಧಿಸುತ್ತಲೇ ಬಂದಿರುತ್ತಾನೆ.

ಪೌಲನು ನಂತರ **ವಾಕ್ಯ** (*λόγος*, *logos*) ವನ್ನು ಹೆಸರಿಸುತ್ತಾನೆ. ವಾಕ್ಯಗಳು ಒಂದು ಸಂದೇಶವು ಪ್ರಕಟಗೊಳಿಸಲ್ಪಡುವಂಥ ಮಾಧ್ಯಮಗಳಾಗಿರುತ್ತವೆ. ವಿಶ್ವಾಸಿಗಳಲ್ಲದವರ ಕಿವಿಗಳಿಗೆ ಸಂದೇಶವನ್ನು ಒಳಗೊಂಡಿರುವ "ವಾಕ್ಯ"ವು ತಲುಪುವದಾದರೆ ಅವರು ಸಂದೇಶವನ್ನು ಕೇಳುವದಕ್ಕೆ ಶಕ್ತರಾಗಬಹುದು. ನಾಶನದಲ್ಲಿರುವವರೊಂದಿಗೆ ಮಾತಾಡಲು ಒಂದು ಹಾದಿ ಸಿಕ್ಕಬೇಕೆಂದು ಹಾರೈಸಿದನು. ಆತನು ಹೋಗಬಹುದಾದ ಸ್ಥಳಗಳಿಗೆ ಹೋಗದಂತೆ ಬೇಡಿಗಳು ಆತನನ್ನು ಹಿಡಿದಿಟ್ಟುಕೊಂಡದ್ದರಿಂದ, ಆತನ ಸಂದೇಶವನ್ನು ಕೇಳಿಸಿಕೊಳ್ಳಲು ಜನರೇ ಆತನ ಬಳಿಗೆ ಬರಬೇಕಿತ್ತು.

ಈ ಕೆಳಗೆ ಕಾಣಲ್ಪಡುವ ರೀತಿಯಲ್ಲಿ, ವಾಕ್ಯವು ಜೀವಧಾರಕವಾಗಿರುತ್ತದೆ:

ಅದು ಬದುಕಿಸುವಂಥದ್ದು ಮತ್ತು ಬಲವುಳ್ಳದ್ದು (ಯೋಹಾನ 6:63; ಇಬ್ರಿಯ 4:12).
ಪಾಪದಿಂದ ಬಿಡುಗಡೆ ಸಿಕ್ಕುವದಕ್ಕೆ ಮೂಲವಾಗಿರುತ್ತದೆ (ಯೋಹಾನ 8:32).
ಅದು ಪರಿಶುದ್ಧಗೊಳಿಸಲ್ಪಟ್ಟವರಾಗುವದಕ್ಕೆ ತಳಹದಿಯಾಗಿರುತ್ತದೆ (ಯೋಹಾನ 17:17).
ಅದು ರಕ್ಷಣೆಯನ್ನು ತರುತ್ತದೆ (ಅಪೊಸ್ತಲರ ಕೃತ್ಯಗಳು 11:14).
ಅದು ನಂಬಿಕೆಯ ಮೂಲವಾಗಿದೆ (ರೋಮಾ 10:17).
ಅದು ಆತ್ಮವನ್ನು ಶುದ್ಧ ಮಾಡುತ್ತದೆ (1 ಪೇತ್ರ 1:22).
ಅದು ಪುನರ್ಜನ್ಮವನ್ನು ಒದಗಿಸುತ್ತದೆ (1 ಪೇತ್ರ 1:23).

ಆತನ ವಾಕ್ಯವನ್ನು ಕೈಕೊಂಡು ನಡೆದು ಅದಕ್ಕೆ ವಿಧೇಯರಾಗುವವರೇ ಅದರಿಂದ ಆಶೀರ್ವದಿಸಲ್ಪಟ್ಟವರಾಗಿರುತ್ತಾರೆ. ವಾಕ್ಯವು ಅಂಗೀಕರಿಸಿಕೊಳ್ಳಲ್ಪಡತಕ್ಕದ್ದು, ಸರಿಯಾಗಿ

ಉಪದೇಶಿಸಲ್ಪಡತಕ್ಕದ್ದು, ಮತ್ತು ಸಾರಲ್ಪಡತಕ್ಕದ್ದು (1 ಥೆಸಲೋನಿಕ 2:13; 2 ತಿಮೊಥೆ 2:15; 4:2).

ವಾಕ್ಯವು ಸಾರಲ್ಪಡುವಂತೆ ಒಂದು ಸಂದರ್ಭದ ಬಾಗಿಲನ್ನು ತೆರೆಯುವವನು ದೇವರೇ ಆಗಿದ್ದಾನೆ, ಆದರೆ ಅದನ್ನು ಸಾರುವದಕ್ಕಾಗಿ ಆತನ ಸಂದೇಶಕರು ಆ ಬಾಗಲಿನೊಳಗೆ ಪ್ರವೇಶಿಸಬೇಕು. ದೇವರು ಅನ್ಯಜನರಿಗೋಸ್ಕರ ನಂಬಿಕೆಯ ಬಾಗಿಲನ್ನು ತೆರೆದನು (ಅಪೊಸ್ತಲರ ಕೃತ್ಯಗಳು 14:27); ಹೇಗೂ, ಪೌಲ ಮತ್ತು ಬಾರ್ನಬರು ಆ ಬಾಗಲಿನ ಮೂಲಕ ಪ್ರವೇಶಿಸಿ ರಕ್ಷಣೆಯ ಸಂದೇಶವನ್ನು ಸಾರಿದ ಆತನ ಪ್ರತಿನಿಧಿಗಳಾಗಿದ್ದರು. ಪ್ರಸಂಗಿಸುವದಕ್ಕೆ ಒಂದು ಸಂದರ್ಭವು ಸಿಕ್ಕ ಬಿಟ್ಟರೆ ಸಂದೇಶವು ಅಂಗೀಕರಿಸಿಕೊಳ್ಳಲ್ಪಡುವದೆಂಬ ಅರ್ಥವಾಗುವದಿಲ್ಲ, ಯಾಕೆಂದರೆ ವಾಕ್ಯವನ್ನು ಸ್ವೀಕರಿಸಿಕೊಳ್ಳುವ ಜವಾಬ್ದಾರಿಯು ಶ್ರೋತೃಗಳ ಮೇಲಿರುತ್ತದೆ (ಅಪೊಸ್ತಲರ ಕೃತ್ಯಗಳು 2:41; 11:1; ಯಾಕೋಬ 1:21). ಅನೇಕರು ತಮಗೆ ಪೌಲನು ಪ್ರಸಂಗಿಸಿದ್ದನ್ನು ಅಂಗೀಕರಿಸಿಕೊಳ್ಳಲು ನಿರಾಕರಿಸಿದರು (ನೋಡಿರಿ ಅಪೊಸ್ತಲರ ಕೃತ್ಯಗಳು 13:46).

## "ಕ್ರಿಸ್ತನ ವಿಷಯದಲ್ಲಿ ದೇವರು ತಿಳಿಸಿದ ಸತ್ಯಾರ್ಥವನ್ನು ಪ್ರಸಂಗಿಸುವದಕ್ಕೆ . . . ಆ ಸತ್ಯಾರ್ಥದ ನಿಮಿತ್ತವೇ ನಾನು ಸೆರೆಯಲ್ಲಿದ್ದೇನಲ್ಲಾ" (4:3-4)

ಪೌಲನು 1:26, 27ರಲ್ಲಿರುವಂತೆಯೇ, ಇಲ್ಲಿ **ಮರ್ಮ** — ಸತ್ಯಾರ್ಥ — (μυστήριον, *mustērion*) ಎಂಬದರ ಕುರಿತು ಮಾತಾಡುತ್ತಾನೆ. ಹಳೆಯ ಒಡಂಬಡಿಕೆಯಲ್ಲಿ **ಕ್ರಿಸ್ತನ** ಕುರಿತಾದ ಪ್ರಕಟಣೆಯು ಮರೆಯಾಗಿತ್ತು, ಆದರೆ ಹೊಸ ಒಡಂಬಡಿಕೆಯಲ್ಲಿ ಮರ್ಮವು ಪ್ರಕಟಗೊಳಿಸಲ್ಪಟ್ಟಿತು (ರೋಮಾ 16:25, 26; ಎಫೆಸ 3:3–5; 1:26ರ ಮೇಲಿನ ಚರ್ಚೆಯನ್ನು ನೋಡಿರಿ). ಪೌಲನ ಗುರಿಯು "ಸುವಾರ್ತಾಸತ್ಯಾರ್ಥವನ್ನ ಭಯವಿಲ್ಲದೆ ತಿಳಿಸಬೇಕು" ಎಂಬದಾಗಿತ್ತು (ಎಫೆಸ 6:19).

ಕ್ರಿಸ್ತನ ಮರ್ಮ ಕುರಿತಾದ ತನ್ನ ಪ್ರಸಂಗದ ನಿಮಿತ್ತವಾಗಿ, ಪೌಲನು **ಸೆರೆಯಲ್ಲಿದ್ದನು**. "ಸೆರೆಯಲ್ಲಿದ್ದೇನಲ್ಲಾ" ಎಂಬುದಕ್ಕಾಗಿರುವ, δέω (*deō*), ಪದದ ಅಕ್ಷರಶಃ ಅರ್ಥವು "ಎಲ್ಲೆಗಳಿಗೊಳಪಟ್ಟ" ಎಂದಾಗಿರುತ್ತದೆ.[5] ಪೌಲನು "ದೇವರ ವಾಕ್ಯಕ್ಕೆ ಬಂಧನವಿಲ್ಲ" (2 ತಿಮೊಥೆ 2:9) ಮತ್ತು ವಿವಾಹಿತ ಸ್ತ್ರೀಯು ನ್ಯಾಯದ ಪ್ರಕಾರ ಗಂಡನಿಗೆ ಬದ್ಧಳಾಗಿರುವಳು ಎಂದು ಬರೆದಾಗ ಈ ಪದವನ್ನು ಬಳಸಿದನು (ರೋಮಾ 7:2; 1 ಕೊರಿಂಥ 7:27, 39).

ಕೊಲೊಸ್ಸೆಯೊಳಗೆ ಬೇರೊಂದು ಕಡೆಯಲ್ಲಿ, ಪೌಲನು ತನ್ನ ಸೆರೆಮನೆಗೆ ಸಂಬಂಧಿಸಿದ ಬಾಧೆಯ ಬಗ್ಗೆ ಪರೋಕ್ಷವಾಗಿ ತಿಳಿಸುತ್ತಾನೆ (1:24; 4:7–9). ಆತನು ಫಿಲಿಪ್ಪಿ 1:7, 13, 14, 17; ಕೊಲೊಸ್ಸೆ 4:18; 2 ತಿಮೊಥೆ 2:9; ಮತ್ತು ಫಿಲೆಮೋನನಿಗೆ 10, 13ರಲ್ಲಿ ತನ್ನ ಸೆರೆವಾಸ ಅಥವಾ "ಬೇಡಿಬಿದ್ದಿರುವ" (δεσμός, *desmos*) ಬಗ್ಗೆ ಮಾತಾಡುತ್ತಾನೆ.

ಆತನು ರೋಮಾಪುರಕ್ಕೆ ಬಂದು ತಲುಪಿದಾಗ, ಪೌಲನಿಗೆ ಕನಿಷ್ಠ ಎರಡು ವರ್ಷಗಳ ಕಾಲ "ತನ್ನನ್ನು ಕಾಯುತ್ತಿದ್ದ ಸಿಪಾಯಿಯೊಂದಿಗೆ ಪ್ರತ್ಯೇಕವಾಗಿ ಇರಬಹುದು" ಎಂಬ ಅನುಮತಿಯನ್ನು ಪಡೆದಿದ್ದನು (ಅಪೊಸ್ತಲರ ಕೃತ್ಯಗಳು 28:16). ಆತನು ಬೇಡಿಗಳಲ್ಲಿದ್ದವನು (ಎಫೆಸ 6:20) ಮತ್ತು ಸಿಪಾಯಿಗಳಿಂದ ಕಾಯಲ್ಪಡುವವನು ಆಗಿದ್ದಾಗ್ಯೂ, ಆತನು ಸ್ವಂತ ಬಾಡಿಗೆ ಮನೆಯನ್ನು ಹೊಂದಿದ್ದನು. ಆತನನ್ನು ಭೇಟಿ ಮಾಡುವದಕ್ಕೆ ಜನರು ಮುಕ್ತವಾಗಿ

ಬರುತ್ತಿದ್ದರು (ಅಪೊಸ್ತಲರ ಕೃತ್ಯಗಳು 28:30, 31). ಪೌಲನು ಈ ವಚನದಲ್ಲಿ, "ನಾವು" ಎಂಬುದನ್ನು ಬಿಟ್ಟು "ನಾನು" ಎಂದು ಬರೆಯಲಾರಂಭಿಸುತ್ತಾನೆ. ಇದರ ಉದ್ದೇಶವು ಉಲ್ಲೇಖಿಸಲ್ಪಟ್ಟ ಇತರರಿಗಿಂತ ತನ್ನ ಪರಿಸ್ಥಿತಿಯು ಭಿನ್ನವಾದದ್ದೆಂಬುದನ್ನು ತೋರಿಸಿಕೊಳ್ಳುವದೇ ಆಗಿರಬಹುದಾಗಿದೆ. Peter T. O'Brien ಹೀಗೆ ಹೇಳುತ್ತಾನೆ, "ಏಕವಚನಕ್ಕೆ ಬದಲಾಗುವಿಕೆಯು ಸಹಜವಾದದ್ದಾಗಿತ್ತು ಯಾಕೆಂದರೆ ತನಗೂ ಇತರರಿಗೂ ಯಾವದು ಸಾಮಾನ್ಯವಾಗಿತ್ತೋ ಅದನ್ನು ದಾಟಿ ತನಗೆ ನಿರ್ದಿಷ್ಟವಾಗಿ ಸಂಭವಿಸಿದ್ದನ್ನು ಕುರಿತು ಹೇಳುವದಕ್ಕೆ ಸಾಗುತ್ತಾನೆ . . ."[6]

ಈ ಸಮಯದಲ್ಲಿ ಪೌಲನು ರೋಮಾಪುರದಲ್ಲಿನ ಸೆರೆಮನೆಯಲ್ಲಿದ್ದನು ಯಾಕೆಂದರೆ ತನ್ನನ್ನು ಕೊಲ್ಲಲು ಹೊಂಚು ಹಾಕಿದ್ದ ಯೆಹೂದ್ಯರ ಕೈಗಳಲ್ಲಿ ಬೀಳುವದಕ್ಕಿಂತಲೂ ಕೈಸರನಿಂದ ವಿಚಾರಿಸಲ್ಪಡುವದಕ್ಕೋಸ್ಕರ ಸೆರೆಮನೆಯಲ್ಲಿ ಕಾಯ್ದುಕೊಂಡಿರುವದೇ ಉತ್ತಮವಾದದ್ದಾಗಿತ್ತು (ಅಪೊಸ್ತಲರ ಕೃತ್ಯಗಳು 25:1-3). ಆತನು ರೋಮನ್ ಸರ್ಕಾರದ ಸುರಕ್ಷಿತವಾದ ವಶದಲ್ಲಿರುವದಕ್ಕೋಸ್ಕರವೇ ಕೈಸರನಿಗೆ ಮೇಲ್ಮನವಿಯನ್ನು ಸಲ್ಲಿಸಿದ್ದನು (ಅಪೊಸ್ತಲರ ಕೃತ್ಯಗಳು 25:8-12). ಈ ಮನವಿಯನ್ನು ಸಲ್ಲಿಸಿದ ನಂತರದಲ್ಲಿ, ಆತನನ್ನು ಬೇಡಿಗಳಲ್ಲಿ ರೋಮಾಪುರಕ್ಕೆ ಕಳುಹಿಸಲಾಗಿತ್ತು. ಒಬ್ಬ ರೋಮನ್ ನಾಗರಿಕನಾಗಿ ಅದು ಆತನ ಹಕ್ಕು ಆಗಿತ್ತು.

### "ನಾನು ಅದನ್ನು ಹೇಳಬೇಕಾದ ರೀತಿಯಲ್ಲಿ ತಿಳಿಸುವಂತೆ" (4:3-4)

ಕೊಲೊಸ್ಸೆಯವರು ಆತನಿಗೋಸ್ಕರ ಮಾಡುವ ಪ್ರಾರ್ಥನೆಯಲ್ಲಿ ಎರಡು ಮನವಿಗಳನ್ನು ಸೇರ್ಪಡೆಗೊಳಿಸಿಕೊಳ್ಳುವಂತೆ ಪೌಲನು ಕೇಳಿಕೊಂಡನು: ವಾಕ್ಯವನ್ನು ಸಾರುವದಕ್ಕೆ ತನಗೊಂದು ಅನುಕೂಲವಾದ ಸಂದರ್ಭ ಸಿಕ್ಕುವಂತೆ ಮತ್ತು ಆತನು ಅದನ್ನು ವ್ಯಕ್ತವಾಗುವ ಹಾಗೂ ಅರ್ಥವಾಗಬಲ್ಲ ರೀತಿಯಲ್ಲಿ ತಿಳಿಸುವವನಾಗುವಂತೆ. ಆತನ ಸಂದೇಶವು ಧೈರ್ಯದಿಂದ, ಸಜ್ಜನಿಕೆಯಿಂದ, ಮತ್ತು ಬುದ್ಧಿವಂತಿಕೆಯಿಂದ ಸಾರಲ್ಪಡುವಂತಾಗಲು ಅವರು ಪ್ರಾರ್ಥಿಸಬೇಕಿತ್ತು. ಆತನು ತನಗೋಸ್ಕರ ಅಥವಾ ತನ್ನ ಸಂಗಡಿಗರಿಗೋಸ್ಕರ ಅವರಿಗೆ ಆಶೀರ್ವಾದ ಸಿಕ್ಕುವಂತೆ ಪ್ರಾರ್ಥಿಸಬೇಕೆಂದು ಬೇಡಿಕೊಳ್ಳಲಿಲ್ಲ; ಬದಲಾಗಿ, ಆತನ ಚಿಂತೆಯೆಲ್ಲವೂ ತನ್ನ ಸಂದೇಶವು ಅವರಿಂದ ಅರ್ಥಮಾಡಿಕೊಳ್ಳಲ್ಪಡಬೇಕು ಎಂಬದೇ ಆಗಿತ್ತು.

**ತಿಳಿಸುವಂತೆ,** ಎಂಬುದು ಗ್ರೀಕ್‌ನಲ್ಲಿ ಒಂದೇ ಪದವಾಗಿದ್ದು (φανερόω, *phaneroō*), ಅದು 1:26ರಲ್ಲಿ "ತಿಳಿಸಲ್ಪಟ್ಟಿದೆ" ಎಂದು ಮತ್ತು 3:4ರಲ್ಲಿ "ಪ್ರತ್ಯಕ್ಷವಾಗುವಾಗ" ಎಂದು ಅನುವಾದಿಸಲ್ಪಟ್ಟಿರುವ ಅದೇ ಪದದಿಂದ ಬಂದದ್ದಾಗಿದೆ. ಕೇಳುವವರು ಅರ್ಥಮಾಡಿಕೊಳ್ಳುವಂತೆ ಕಾರ್ಯಮಾಡು ಎಂದು ಪೌಲನು ದೇವರನ್ನು ಬೇಡಿಕೊಳ್ಳಲಿಲ್ಲ. ಆತನಿಗೆ ತನ್ನ ಜವಾಬ್ದಾರಿಯಿತ್ತು ಮತ್ತು ಅವರಿಗೆ ಅವರ ಜವಾಬ್ದಾರಿಯಿತ್ತು. ತನ್ನ ಶ್ರೋತೃಗಳ ಮೇಲೆ ಛಾಪು ಮೂಡಿಸುವದಕ್ಕೆ ವಾಗ್ಮಿತೆ ಅಥವಾ ಭಾಷಣಕಲೆಯನ್ನು ಅಪೇಕ್ಷಿಸುವ ಬದಲಾಗಿ, ಆತನು ತನ್ನ ಪ್ರಸಂಗವು ಸ್ಪಷ್ಟ ಹಾಗೂ ಸುಲಭವಾಗಿ ಗ್ರಹಿಸಿಕೊಳ್ಳುವಂಥದ್ದಾಗಿರಬೇಕೆಂದು ಬಯಸಿದನು. ಆತನು ಮಾಹಿತಿ ನೀಡಲು ಹಾರೈಸಿದನೇ ಹೊರತು ಛಾಪು ಮೂಡಿಸುವದನ್ನಲ್ಲ (ನೋಡಿರಿ 1 ಕೊರಿಂಥ 2:1).

ಅಪೊಸ್ತಲನು ತಾನು **ಹೇಳಬೇಕಾದ ರೀತಿಯಲ್ಲಿ** [δεῖ, *dei*] ಮಾತಾಡುವದಕ್ಕೆ

ಬಯಸಿದನು. ಈ ಹೇಳಿಕೆಯೊಳಗೆ ಅವಶ್ಯಕತೆ, ಕರ್ತವ್ಯ, ಹೊಣೆಗಾರಿಕೆ, ಮತ್ತು ಬದಲಾಯಿಸಲಾಗದಂಥ ಅಗತ್ಯತೆ ಎಂಬ ಯೋಚನೆಗಳು ಸೇರಿರುತ್ತವೆ. *Dei* ಎಂಬುದು ಅನೇಕ ಸಾರಿ "ಬೇಕು" ಎಂದು ಅನುವಾದಿಸಲ್ಪಡುತ್ತದೆ. (ನೋಡಿರಿ ಮತ್ತಾಯ 23:23; 24:6; ಲೂಕ 2:49; 9:22; ಯೋಹಾನ 4:24; 12:34; ಅಪೊಸ್ತಲರ ಕೃತ್ಯಗಳು 4:12; 9:6.)

ರಕ್ಷಣೆಯನ್ನುಂಟು ಮಾಡುವದಕ್ಕೆ ಶಕ್ತಿಯು ಸಂದೇಶದಲ್ಲಿರುತ್ತದೆಯೇ (ಅಪೊಸ್ತಲರ ಕೃತ್ಯಗಳು 11:14; ರೋಮಾ 1:16) ಹೊರತು ಸಂದೇಶ ಸಾರುವವನಲ್ಲಿ ಅಲ್ಲ. ಹಾಗಿದ್ದಾಗ್ಯೂ, ಸಂದೇಶಕನು ಸಂದೇಶಕ್ಕೆ ಅಡ್ಡಿಯನ್ನುಂಟು ಮಾಡದ ರೀತಿಯಲ್ಲಿ ಆತನ ಜೀವನ ಹಾಗೂ ಭಾಷೆಗಳು ಇರತಕ್ಕದ್ದು. ಸತ್ಯವೇ – ಪ್ರೀತಿಯಿಂದ ಮತ್ತು ಸರಿಯಾಗಿ ಪ್ರಸಂಗಿಸಿದ – ದೇವರು ಜನರನ್ನು ರಕ್ಷಿಸುವದಕ್ಕೆ ಆರಿಸಿಕೊಂಡ ದಾರಿಯಾಗಿರುತ್ತದೆ.

## ಹೊರಗಿನವರ ಮುಂದೆ ಜ್ಞಾನವುಳ್ಳವರಾಗಿ ನಡೆದುಕೊಳ್ಳಿರಿ (4:5, 6)

**5ಸಮಯವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿ ಹೊರಗಿನವರ ಮುಂದೆ ಜ್ಞಾನವುಳ್ಳವರಾಗಿ ನಡೆದುಕೊಳ್ಳಿರಿ. 6ನಿಮ್ಮ ಸಂಭಾಷಣೆ ಯಾವಾಗಲೂ ಇಂಪಾಗಿಯೂ ರಸವತ್ತಾಗಿಯೂ ಇರಲಿ; ಹೀಗೆ ನೀವು ಯಾರಾರಿಗೆ ಯಾವಾವ ರೀತಿಯಲ್ಲಿ ಉತ್ತರಹೇಳಬೇಕೋ ಅದನ್ನು ತಿಳುಕೊಳ್ಳುವಿರಿ.**

ಕ್ರೈಸ್ತ ಜೀವಿತವು ದೇವರೊಂದಿಗಿನ ಮತ್ತು ಸಭೆಯೊಂದಿಗಿರುವ ಸಂಬಂಧದ ವಿಷಯದಲ್ಲಿ ಪ್ರಾಮುಖ್ಯವಾಗಿರುವದು ಮಾತ್ರವಲ್ಲದೆ, ಲೋಕದ ಮುಂದೆ ಹೇಗೆ ಮಾದರಿ ತೋರುತ್ತೇವೆ ಎಂಬದರಲ್ಲಿ ಸಹ ಪ್ರಾಮುಖ್ಯವಾಗಿರುತ್ತದೆ. ಹೊರಗಿನವರ ಮುಂದೆ ಹೇಗೆ ನಡೆದುಕೊಳ್ಳಬೇಕು ಎಂಬ ವಿಷಯದಲ್ಲಿ ಪೌಲನು ಕೊಲೊಸ್ಸೆಯವರಿಗೆ ನಾಲ್ಕು ಮಾರ್ಗಸೂಚಿಗಳನ್ನು ನೀಡುತ್ತಾನೆ.

### "ಹೊರಗಿನವರ ಮುಂದೆ ಜ್ಞಾನವುಳ್ಳವರಾಗಿ ನಡೆದುಕೊಳ್ಳಿರಿ" (4:5)

**ನಡೆದುಕೊಳ್ಳಿರಿ** (περιπατεῖτε, *peripateite*) ಎಂಬುದು ಮಧ್ಯಪುರುಷ ಆಜ್ಞಾರ್ಥಕದಲ್ಲಿ ಅಕ್ಷರಶಃ "ನಡೆ" ಎಂಬರ್ಥವನ್ನು ಕೊಡುತ್ತದೆ (4:5; ಮತ್ತಾಯ 4:18; 9:5; 1 ಯೋಹಾನ 1:6). *Peripateō* ಎಂಬುದು ಒಬ್ಬ ವರ್ತನೆ, ಜೀವಿಸುವ ರೀತಿ ಅಥವಾ ನಡವಳಿಕೆಯನ್ನು ಸಹ ಪ್ರತಿಬಿಂಬಿಸುವದಾಗಿದೆ (ಮಾರ್ಕ 7:5; ಯೋಹಾನ 8:12; 11:9, 10; 12:35). ಪೌಲನ ಬರಹಗಳ ಹೊರಗಡೆಯಲ್ಲಿ ಈ ಕ್ರಿಯಾಪದವು ಬೇರೆ ಅರ್ಥಗಳನ್ನು ಹೊಂದಿರುತ್ತದೆ, ಅದರಲ್ಲಿ "ಸೆಳವಿಗೆ ಸಿಕ್ಕಿಕೊಳ್ಳುವದು" (ಇಬ್ರಿಯ 13:9) ಮತ್ತು "ಹುಡುಕುತ್ತಾ ತಿರುಗು" (1 ಪೇತ್ರ 5:8) ಎಂಬವುಗಳು ಸೇರಿರುತ್ತವೆ. ಪೌಲನು ಶಾರೀರಿಕ ರೀತಿಯಲ್ಲಿ ನಡೆಯುವದು ಎಂಬ ಅರ್ಥದಲ್ಲಿ *peripateō* ಪದವನ್ನು ಎಂದಿಗೂ ಬಳಸಲಿಲ್ಲ, ಆದರೆ ಕೇವಲ ಸಾಂಕೇತಿಕ ಅರ್ಥದಲ್ಲಿ ನಡವಳಿಕೆಯನ್ನು ಸೂಚಿಸಿ ಬಳಸಿದನು (ಕೊಲೊಸ್ಸೆ 1:10; 2:6; 3:7; 4:5).

ಪೌಲನು **ಹೊರಗಿನವರ** ಅಥವಾ ವಿಶ್ವಾಸಿಗಳಲ್ಲದವರ **ಮುಂದೆ ಜ್ಞಾನವುಳ್ಳವರಾಗಿ** [σοφία, *sophia*] ನಡೆದುಕೊಳ್ಳುವದರಿಂದಾಗುವ ಪರಿಣಾಮಗಳ ಕುರಿತಾಗಿ ವಿವರಗಳನ್ನು ನೀಡುವದಿಲ್ಲ. ಆತನು ತನ್ನ ಬೇರೆ ಪತ್ರಿಕೆಗಳಲ್ಲಿ ಕ್ರಿಸ್ತನ

ದೇಹದಲ್ಲಿರುವವರನ್ನು ಅಥವಾ ಅದರ ಹೊರಗಿರುವವರನ್ನು ನೋಯಿಸದ ರೀತಿಯಲ್ಲಿ ಕ್ರೈಸ್ತರು ಹೇಗೆ ನಡೆದುಕೊಳ್ಳಬೇಕು ಎಂಬ ಬಗ್ಗೆ ಚರ್ಚಿಸುತ್ತಾನೆ (ರೋಮಾ 14:1-21; 1 ಕೊರಿಂಥ 8:8-13; 9:19-23; 10:31-33). "ಹೊರಗಿನವರ" (τοὺς ἔξω, *tous exō*), ಅಕ್ಷರಶಃ "ಹೊರಗೆ ಇರುವ [ವರು]" ಎಂದು ಹೇಳುವ ಮೂಲಕ, ಪೌಲನ ತಾತ್ಪರ್ಯವು ಕ್ರಿಸ್ತನ ದೇಹದಿಂದ ಹೊರಗೆ ಇರುವವರು ಎಂದಾಗಿತ್ತು. ಕೊಲೊಸ್ಸೆಯವರು ಅವರೊಂದಿಗಿನ ತಮ್ಮ ಸಹವಾಸದಲ್ಲಿ ಜ್ಞಾನವನ್ನು ಅಭ್ಯಾಸ ಮಾಡಿಕೊಳ್ಳಬೇಕಿತ್ತು. ಅವರು ನಂಬಿಕೆಯಲ್ಲಿ ದೇವರನ್ನು ಬೇಡಿಕೊಳ್ಳುವ ಮೂಲಕ (ಯಾಕೋಬ 1:5, 6) ಮತ್ತು ದೇವರ ಪ್ರಕಟಿಸಲ್ಪಟ್ಟ ಚಿತ್ತದ ತಿಳುವಳಿಕೆಯಿಂದ ತುಂಬಿಸಲ್ಪಡುವ (ಕೊಲೊಸ್ಸೆ 1:9) ಮೂಲಕ ಆ ಜ್ಞಾನವನ್ನು ಪಡಕೊಳ್ಳಬಹುದಾಗಿತ್ತು.

ಕೆಲವರು ಕ್ರೈಸ್ತರನ್ನು ಹಗೆ ಮಾಡುತ್ತಿದ್ದರು ಮತ್ತು ಅವರೊಂದಿಗೆ ದಯೆಯಿಲ್ಲದವರಾಗಿ ನಡೆದುಕೊಳ್ಳುತ್ತಿದ್ದರು. "ಉದಾಹರಣೆಗೆ, [ಕ್ರೈಸ್ತರು] ಯಾವದೇ ಕಾಣುವಂಥ ದೇವರುಗಳನ್ನು ಪೂಜಿಸುತ್ತಿರಲಿಲ್ಲ ಎಂಬ ಕಾರಣಕ್ಕಾಗಿ *ನಾಸ್ತಿಕರೆಂದು*, ಅವರು ಚಕ್ರವರ್ತಿಯ ಪ್ರತಿಮೆಯ ಮುಂದೆ ಧೂಪವನ್ನು ಸುಡಲಿಲ್ಲ ಎಂಬ ಕಾರಣಕ್ಕಾಗಿ *ದೇಶಪ್ರೇಮರಹಿತರೆಂದು*, ಅವರು, ಅನಿವಾರ್ಯತೆಯಿಂದಾಗಿ, ಬಾಗಲುಗಳನ್ನು ಭದ್ರಪಡಿಸಿಕೊಂಡು ಒಟ್ಟಾಗಿ ಕೂಡಿಬರುತ್ತಿದ್ದ ಕಾರಣದಿಂದ *ನೀತಿಗೆಟ್ಟವರೆಂದು* ಕರೆಯಲ್ಪಡುತ್ತಿದ್ದರು."[7]

ಪೌಲನು ಕ್ರೈಸ್ತರಿಗೆ ಹೀಗೆ ಬರೆದನು, "ಯೆಹೂದ್ಯರಿಗಾಗಲಿ ಗ್ರೀಕರಿಗಾಗಲಿ ದೇವರ ಸಭೆಗಾಗಲಿ ವಿಘ್ನವಾಗಬೇಡಿರಿ" (1 ಕೊರಿಂಥ 10:32). ಅವರ ಜೀವಿತಗಳು ಜಾಗರೂಕತೆಯಿಂದ ಕ್ರಮಪಡಿಸಿಕೊಳ್ಳಲ್ಪಟ್ಟವುಗಳು ಹಾಗೂ ನೈತಿಕವಾಗಿ ಸೌಂದರ್ಯವುಳ್ಳವುಗಳು ಆಗಿರುವ ಅಗತ್ಯವಿತ್ತು. ಅವರು "ನಿರ್ದೋಷಿಗಳೂ ಯಥಾರ್ಥಮನಸ್ಸುಳ್ಳವರೂ ಆಗಿದ್ದು ವಕ್ರಬುದ್ಧಿಯುಳ್ಳ ಮೂರ್ಖಜಾತಿಯ ಮಧ್ಯದಲ್ಲಿ ದೇವರ ನಿಷ್ಕಳಂಕರಾದ ಮಕ್ಕಳಾಗಿ" ಇರಬೇಕಿತ್ತು (ಫಿಲಿಪ್ಪಿ 2:15). ಅವರು ತಮ್ಮ ಮೂಲಕ ಪ್ರಕಾಶಿಸುವಂತೆ ಯೇಸುವಿಗೆ ಅವಕಾಶ ಕೊಡುವ ಮೂಲಕ ಕತ್ತಲೆಯಲ್ಲಿರುವ ಲೋಕವೊಂದಕ್ಕೆ ಬೆಳಕುಗಳಾಗಿರಬಲ್ಲರು (ಮತ್ತಾಯ 5:14-16).

## "ಕಾಲವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿ" (4:5)

ನಡವಳಿಕೆಯ ಕುರಿತು ಒತ್ತಿ ಹೇಳಿ ವಿವರಿಸುವದರಲ್ಲಿ, ಪೌಲನು ಮಾರುಕಟ್ಟೆಯ ಒಂದು ಪದವನ್ನು ಬಳಸಿಕೊಳ್ಳುತ್ತಾನೆ. **ಬೆಲೆಯುಳ್ಳದ್ದೆಂದು ಉಪಯೋಗಿಸಿ** (ἐξαγοραζόμενοι, *exagorazomenoi*) ಎಂಬುದು, ಎಫೆಸ 5:16ರಲ್ಲಿ ಅದೇ ರೀತಿಯಲ್ಲಿ ಬಳಸಲ್ಪಟ್ಟಿದ್ದು, ಅಕ್ಷರಶಃ "ಖರೀದಿಸು," ಅಥವಾ ಲಭ್ಯವಿರುವ ಯಾವದೋ ಒಂದು ವಿಧದ ಪ್ರತಿಯೊಂದು ಉತ್ಪನ್ನಗಳನ್ನು ಖರೀದಿಸು ಎಂದಾಗಿರುತ್ತದೆ. ಆ ಪದವು "ಬಿಡಿಸಿಕೋ" ಎಂದು ಸಹ ಅನುವಾದಿಸಲ್ಪಟ್ಟಿರುತ್ತದೆ (ಗಲಾತ್ಯ 3:13; 4:5).

**ಸಮಯವನ್ನು** (καιρός, *kairos*), ಅಥವಾ "ಕಾಲ," ಎಂಬುದು ಒಂದು ನಿರ್ದಿಷ್ಟವಾದ ಕಾಲಾವಧಿಯನ್ನು ಸೂಚಿಸುವದಿಲ್ಲ (ಗಲಾತ್ಯ 6:9, 10; 1 ಪೇತ್ರ 5:6), ಆದರೆ ಅದು ಒಂದು ಸಮಯದ ಅವಧಿಗೆ ಅನ್ವಯವಾಗಬಲ್ಲದು (1 ಕೊರಿಂಥ 7:5, 29; 2 ತಿಮೊಥೆ 4:3; 1 ಪೇತ್ರ

1:5). *Kairos* ಎಂಬುದು "ಕಾಲಗಳು" (ಅಪೊಸ್ತಲರ ಕೃತ್ಯಗಳು 14:17; ಗಲಾತ್ಯ 4:10) ಮತ್ತು "ಪರ್ವಗಳು" (ಅಪೊಸ್ತಲರ ಕೃತ್ಯಗಳು 1:7; 1 ಥೆಸಲೋನಿಕ 5:1) ಎಂದು ಸಹ ಅನುವಾದಿಸಲ್ಪಟ್ಟಿರುತ್ತದೆ, ಆದಾಗ್ಯೂ ಅದು ಸಾಮಾನ್ಯವಾಗಿ "ಸಮಯ" ಅಥವಾ "ಸಮಯಗಳು" ಎಂದು ಕಾಣಿಸಿಕೊಳ್ಳುತ್ತದೆ.

ಒಂದು ಅಕ್ಷರಶಃ ಅನುವಾದವು "ಎಲ್ಲಾ ಸಮಯವನ್ನು ಖರೀದಿಸಿಟ್ಟುಕೊಳ್ಳಿರಿ" ಎಂದಾಗಿರುತ್ತದೆ. ಇನ್ನೊಂದು ಭಾವಾನುವಾದವೆಂದರೆ "ನಿಮಗೆ ಇರುವ ಸಮಯದ ಲಾಭವನ್ನು ಪಡೆದುಕೊಳ್ಳುತ್ತಲಿರಿ" ಅಥವಾ "ನಿಮಗಿರುವ ಸಮಯವನ್ನು ಪೂರ್ಣವಾಗಿ ಬಳಸಿಕೊಳ್ಳಿರಿ" ಎಂದಾಗಿದೆ. ಕ್ರೈಸ್ತರು ಸೋಮಾರಿಗಳಾಗಿರಬಾರದು, ಆದರೆ ಎಲ್ಲಾ ಅವಕಾಶವನ್ನು ಯೇಸುವಿನ ಸೇವೆಯಲ್ಲಿ ಯೋಗ್ಯವಾದದ್ದನ್ನಾಗಿ ಬಳಸಿಕೊಳ್ಳಬೇಕು.

ಅಡ್ಡಿಗಳಿದ್ದರೂ ಕೊಲೊಸ್ಸೆಯವರು ಯೇಸುವಿನ ಸೇವೆಯನ್ನು ಮಾಡಬೇಕು ಎಂಬದು ಪೌಲನ ಅಪೇಕ್ಷೆಯಾಗಿತ್ತು. ಪ್ರತಿಯೊಂದು ಅವಕಾಶದಲ್ಲಿಯೂ ಒಂದು ಕಷ್ಟವು ಇರುತ್ತದೆ, ಆದರೆ ಪ್ರತಿಯೊಂದು ಕಷ್ಟದಲ್ಲಿಯೂ ಒಂದು ಅವಕಾಶವಿರುತ್ತದೆ. ಕ್ರಮ ಕೈಕೊಳ್ಳುವ ವಿಷಯದಲ್ಲಿ ಎದೆಗೇಡುವವರು ಮತ್ತು ಹೆದರಿಕೆಯುಳ್ಳವರು ಆಗಿದ್ದರೆ ಅವರಿಗೆ ಸಿಕ್ಕುವ ಅವಕಾಶಗಳನ್ನು ಸದುಪಯೋಗಪಡಿಸಿಕೊಳ್ಳುವಂತೆ ಪ್ರೋತ್ಸಾಹದ ಅಗತ್ಯವಿರುತ್ತದೆ.

ಯೇಸುವು ಸಮಯ ಪ್ರಜ್ಞೆಯುಳ್ಳವನಾಗಿದ್ದನು. ಆತನು ತನ್ನ ಶಿಷ್ಯರಿಗೆ ಹೀಗೆ ಹೇಳಿದನು, "ನನ್ನನ್ನು ಕಳುಹಿಸಿದಾತನ ಕಾರ್ಯಗಳನ್ನು ನಾವು ಹಗಲಿರುವಾಗಲೇ ನಡಿಸಬೇಕು. ರಾತ್ರಿ ಬರುತ್ತದೆ, ಅದು ಬಂದ ಮೇಲೆ ಯಾರೂ ಕೆಲಸ ಮಾಡಲಾರರು" (ಯೋಹಾನ 9:4). ಆತನು ಎಂದಿಗೂ ಅವಸರದಲ್ಲಿರುವಂತೆ ಕಾಣಿಸಲಿಲ್ಲವಾದರೂ, ಆತನು ಯಾವಾಗಲೂ ಯೋಗ್ಯವಾದದ್ದನ್ನೇ ಮಾಡುವವನಾಗಿದ್ದನು. ಆತನು ಎಂದಿಗೂ ಸಮಯವನ್ನು ವ್ಯರ್ಥ ಮಾಡಲಿಲ್ಲ.

## "ನಿಮ್ಮ ಸಂಭಾಷಣೆ ಯಾವಾಗಲೂ ಇಂಪಾಗಿಯೂ ರಸವತ್ತಾಗಿಯೂ ಇರಲಿ" (4:6)

ನಂತರ, ಪೌಲನು **ಸಂಭಾಷಣೆಯ** ವಿಷಯದಲ್ಲಿನ ಕಳಕಳಿಯ ಬಗ್ಗೆ ಮಾತಾಡುತ್ತಾನೆ. Λόγος (*logos*) ಬಹಳಷ್ಟು ಸಾರಿ "ವಾಕ್ಯ" ಎಂದು ಅನುವಾದಿಸಲ್ಪಟ್ಟಿದ್ದು, ಕೊಲೊಸ್ಸಯವರಿಗೆ ಬರೆದ ಪತ್ರಿಕೆಯೊಳಗೆ ಬೇರೆ ಕಡೆಗಳಲ್ಲಿ ಕಾಣಿಸಿಕೊಳ್ಳುತ್ತದೆ (1:5, 25; 3:16, 17; 4:3). ಪೌಲನು ಇಲ್ಲಿ ಸುವಾರ್ತೆಯ ಸಂದೇಶವನ್ನು ಸೂಚಿಸುತ್ತಿಲ್ಲ. ಬದಲಾಗಿ, ಆತನು ಸಂದೇಶವು ತಿಳಿಯಪಡಿಸಲ್ಪಡುವಂಥ ಮಾಧ್ಯಮ, ಮಾತುಗಳ ಬಗ್ಗೆ ಮಾತಾಡುತ್ತಿದ್ದಾನೆ. ದೇವರ ಸಂದೇಶವನ್ನು ತಿಳಿಯಪಡಿಸುವದಕ್ಕೆ ಸಮರ್ಪಕವಾದ ಮಾತುಗಳ ಅಗತ್ಯವಿರುತ್ತದೆ.

ಕ್ರೈಸ್ತನ ಮಾತುಗಳು **ಇಂಪಾಗಿಯೂ** (ἐν χάριτι, *en chariti*) ಇರಬೇಕೆಂದು ನಿರ್ದಿಷ್ಟವಾಗಿ ಹೇಳುತ್ತಾನೆ. *Charis* ಎಂಬದು "ಕೃತಜ್ಞತಾಸ್ತುತಿ" ಎಂಬ ಅರ್ಥವನ್ನು ಕೊಡಬಲ್ಲದಾದರೂ (ನೋಡಿರಿ 3:16), ಪೌಲನು ಹೆಚ್ಚು ಸಂಭಾವ್ಯವಾಗಿ ಸಂಭಾಷಣೆಯಲ್ಲಿನ ವಿಷಯ ಮತ್ತು ರೀತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿರಬಹುದಾಗಿದೆ. ಆತನು ಅವರನ್ನು ರಸವತ್ತಾದ ಸಂಭಾಷಣೆಯನ್ನು ಬಳಸಿರಿ ಮತ್ತು ಇಂಪಾಗಿ ಮಾತಾಡಿರಿ, ಆಕರ್ಷಕವಾದ ಮತ್ತು ಇಷ್ಟವಾಗುವ ಶೈಲಿಯಲ್ಲಿ ಮಾತಾಡಿರಿ ಎಂದು ಬೇಡಿಕೊಳ್ಳುತ್ತಿದ್ದಾನೆ.

ಅವರ ಮಾತುಗಳಲ್ಲಿನ ವಿಷಯವು ಸತ್ಯವಾಗಿರಬೇಕಿತ್ತು, ಮತ್ತು ಅದನ್ನು ಹೇಳುವಂತ ವಿಧವು ವಿಘ್ನವನ್ನುಂಟು ಮಾಡದಂಥ ಧ್ವನಿಯಲ್ಲಿರಬೇಕಾಗಿತ್ತು. ಅವರು ಶ್ರೋತೃಗಳ ಬಗ್ಗೆ ಹಿತಾಸಕ್ತಿಯುಳ್ಳ ಹೃದಯದಿಂದ ಅಂಗೀಕಾರಾರ್ಹವಾದ ಮಾತುಗಳನ್ನು ಆಡಬೇಕಿತ್ತು. ಪೌಲನು ಎಫೆಸದವರಿಗೆ "ಪ್ರೀತಿಯಿಂದ ಸತ್ಯವನ್ನು" ಮಾತಾಡಿರಿ ಎಂದು ಬೋಧಿಸಿದಾಗ ಇದನ್ನು ಮನಸ್ಸಿನಲ್ಲಿಟ್ಟುಕೊಂಡಿರಬಹುದಾಗಿದೆ (ಎಫೆಸ 4:15).

ಕೊಲೊಸ್ಸೆಯವರು ಕೇಳುಗರಲ್ಲಿ ಬೇಸರವನ್ನುಂಟು ಮಾಡದಂಥ ರೀತಿಯಲ್ಲಿ ಮಾತಾಡಬೇಕಿತ್ತು. ಕೆಲವರು ಸ್ವತಃ ಸಂದೇಶದ ಕಾರಣದಿಂದಲೇ ಬೇಸರಪಡಬಹುದಾದರೂ, ಅವರು ಸಂದೇಶ ಸಾರುವವನ ಮಾತುಗಳ ಆಯ್ಕೆಯಿಂದಾಗಿ ಬೇಸರ ಪಡಿಸಲ್ಪಡಕೂಡದಿತ್ತು. ಈ ಸಹೋದರರು, ಇಂದಿನ ಕ್ರೈಸ್ತರ ಹಾಗೆಯೇ, ತಮ್ಮ ಸಂಭಾಷಣೆಯನ್ನು ಒರಟುತನ, ಅಶ್ಲೀಲತೆ ಹಾಗೂ ಭ್ರಷ್ಟತೆಯಿಂದ ಮುಕ್ತವಾಗಿಟ್ಟುಕೊಳ್ಳಬೇಕಿತ್ತು. ಅವರು ಹೊಲಸುಮಾತುಗಳ ಬದಲಾಗಿ, ಕೇಳುವವರ ಭಕ್ತಿವೃದ್ಧಿಯನ್ನುಂಟು ಮಾಡುವಂಥ ನಿರ್ಮಲವಾದ ಆಲೋಚನೆಗಳನ್ನು ಮಾತಾಡಬೇಕಿತ್ತು.

ಕೊಲೊಸ್ಸೆಯವರ ಸಂಭಾಷಣೆಯು ಸದಭಿರುಚಿಯಾಗಿ, ಚಾಕಚಕ್ಯತೆಯುಳ್ಳದ್ದಾಗಿ, ಮನೋಹರವಾಗಿ, ಮತ್ತು ಅಂಗೀಕಾರಾರ್ಹ ರುಚಿಯುಳ್ಳ, **ಉಪ್ಪಿನಿಂದ** [ἅλας, *halas*] **ರುಚಿಯಾದದ್ದಾಗಿಯೂ** [ἀρτύω, *artuō*] (ರಸವತ್ತಾಗಿಯೂ) ಎಂಬಂತೆ ಇರಬೇಕೆಂದು ಪೌಲನು ಎದುರು ನೋಡಿದನು. ಅವರು ಕಠೋರವಾದ, ನಿರ್ದಯವಾದ, ಅಥವಾ ದಾಕ್ಷಿಣ್ಯವಿಲ್ಲದ ಸಂಭಾಷಣೆಯನ್ನು ಬಳಸಬಾರದಿತ್ತು. ಉಪ್ಪು ಆಹಾರಕ್ಕೆ ರುಚಿಯನ್ನು ಕೊಡುವ ಹಾಗೆ, ಕೊಲೊಸ್ಸೆಯವರು ಕೇಳುವವರ ಕಿವಿಗಳಿಗೆ ಇಂಪಾದ ರೀತಿಯಲ್ಲಿರುವಂತೆ ತಮ್ಮ ಸಂಭಾಷಣೆಗಳಿಗೆ ಒಂದು ರುಚಿಕರವಾದ ಪರಿಮಳವನ್ನು ಸೇರಿಸಬೇಕಿತ್ತು. ಉಪ್ಪನ್ನು ಹಳಸುವಿಕೆ ಮತ್ತು ಕೆಟ್ಟುಹೋಗುವಿಕೆಯಿಂದ ತಡೆಯುವದಕ್ಕೆ ಒಂದು ಸಂರಕ್ಷಕವಾಗಿಯೂ ಬಳಸಲ್ಪಡುತ್ತಿತ್ತೆಂಬುದನ್ನು ಎತ್ತಿ ತೋರಿಸುವ ಮೂಲಕ H. C. G. Mouleನು ಪೌಲನ ವರ್ಣನಾತ್ಮಕ ಪದಗುಚ್ಛಕ್ಕೆ ಅಂತರ್ದೃಷ್ಟಿಯನ್ನು ಒದಗಿಸುತ್ತಾನೆ. ಪೌಲನು ಹೀಗೆ ಬರೆದನು, "ನಿಮ್ಮ ಬಾಯೊಳಗಿಂದ ಯಾವ ಕೆಟ್ಟ ["ಭ್ರಷ್ಟ"; KJV; NKJV] ಮಾತೂ ಹೊರಡಬಾರದು; ಭಕ್ತಿಯನ್ನು ವೃದ್ಧಿಮಾಡುವಂಥ ಕಾಲೋಚಿತವಾದ ಮಾತು ಇದ್ದರೆ ಕೇಳುವವರ ಹಿತಕ್ಕಾಗಿ ಅದನ್ನು ಆಡಿರಿ" (ಎಫೆಸ 4:29). ಅವರ ಸಂಭಾಷಣೆಯಲ್ಲಿ ಚಿಮುಕಿಸಲಾದ ಉಪ್ಪು ವ್ಯಕ್ತಗೊಳಿಸುವಿಕೆಯಲ್ಲಿನ ಅಶುದ್ಧತೆ ಹಾಗು ಹೊಲಸನ್ನು ಹೋಗಲಾಡಿಸಿ ಅವರ ಇಂಪಾದ ಮಾತುಗಳನ್ನು ವರ್ಧಿಸತಕ್ಕದ್ದು, ಅದೇ ವೇಳೆಯಲ್ಲಿ "ಒಂದು ಆಹ್ಲಾದಕರವಾದ 'ರುಚಿ'ಯ ನಾದವನ್ನು ಮತ್ತು ಪೋಷಣೆಯನ್ನುಂಟು ಮಾಡುವ 'ಚಿಂತನೆಯ ಆಹಾರ'ವನ್ನು" ಒದಗಿಸತಕ್ಕದ್ದು.[8]

## "ಹೀಗೆ ಯಾರಾರರಿಗೆ ಯಾವಾವ ರೀತಿಯಲ್ಲಿ ಉತ್ತರಹೇಳಬೇಕೋ ಅದನ್ನು ತಿಳಿದುಕೊಳ್ಳುವಿರಿ" (4:6)

ಪೌಲನು ಕ್ರೈಸ್ತರು ಜಾಗರೂಕತೆಯಿಂದ ಸಂಹವನ ಮಾಡಬೇಕಾದ ಪ್ರಾಮುಖ್ಯತೆಯ ಬಗ್ಗೆ ಒತ್ತಿ ಹೇಳುತ್ತಾನೆ. ಕೊಲೊಸ್ಸೆಯವರು ಉತ್ತಮ ಸಮಯೋಚಿತತೆ, ಶ್ರೋತೃಗಳಿಗಾಗಿ ಸರಿಯಾದ ಸಂದೇಶವನ್ನು, ಕೇಳುಗರ ಮೇಲಾಗುವ ಪರಿಣಾಮದ ಸಾಧ್ಯತೆ, ಮತ್ತು ಮಾತಾಡುವಾಗ ಸತ್ಯಕ್ಕೆ ನಿಷ್ಠೆಯಿಂದಿರುವಿಕೆ ಇವುಗಳನ್ನು

ಮನಸ್ಸಿನಲ್ಲಿಟ್ಟುಕೊಳ್ಳಬೇಕಾಗಿತ್ತು. ಅವರ ಗುರಿಯು ಸರಿಯಾದ ಜನರಿಗೆ ಸರಿಯಾದ ಸಮಯದಲ್ಲಿ ಸರಿಯಾದ ಉಪದೇಶವನ್ನೊಳಗೊಂಡ ಸರಿಯಾದ ಮಾತುಗಳನ್ನಾಡುವದೇ ಆಗಿರಬೇಕು. ಪ್ರತಿಯೊಬ್ಬ ಕ್ರೈಸ್ತನೂ ಒಬ್ಬ ಸುವಾರ್ತಿಕನಲ್ಲವಾದರೂ, ಪ್ರತಿಯೊಬ್ಬನು ಸಹ ಎಲ್ಲಾ ಸಂದರ್ಭಗಳಲ್ಲಿ ಒಂದು ಅರ್ಥಪೂರ್ಣವಾದ ಮತ್ತು ಸಭ್ಯವಾದ ರೀತಿಯಲ್ಲಿ ಪ್ರತಿಕ್ರಿಯಿಸಲು ಸಿದ್ಧನಾಗಿರತಕ್ಕದ್ದು. ಪೇತ್ರನು ಹೀಗೆ ಬರೆಯುತ್ತಾನೆ, "ನಿಮ್ಮಲ್ಲಿರುವ ನಿರೀಕ್ಷೆಗೆ ಆಧಾರವೇನೆಂದು ಕೇಳುವವರೆಲ್ಲರಿಗೆ ಉತ್ತರ ಹೇಳುವದಕ್ಕೆ ಯಾವಾಗಲೂ ಸಿದ್ಧವಾಗಿರಿ; ಆದರೆ ಅದನ್ನು ಸಾತ್ವಿಕತ್ವದಿಂದಲೂ ಮನೋಭೀತಿಯಿಂದಲೂ ಹೇಳಿರಿ" (1 ಪೇತ್ರ 3:15). ಬೇರೆಯವರೊಂದಿಗೆ ಚಾಕಚಕ್ಯತೆಯ ಸಂಭಾಷಣೆಯನ್ನು ಮಾಡಬೇಕೆಂದರೆ ಅದಕ್ಕೆ ಅವರ ಭಾವಗಳನ್ನು ಮತ್ತು ಆಸಕ್ತಿಗಳನ್ನು ಅರ್ಥಮಾಡಿಕೊಳ್ಳುವದಕ್ಕೆ ತೀವ್ರವಾದ ಪರಿಶ್ರಮದ ಅಗತ್ಯವಿರುತ್ತದೆ. **ತಿಳಿದುಕೊಳ್ಳುವಿರಿ** ಎಂದು ಹೇಳಿದಾಗ, ಪೌಲನು "ಯಾವದೋ ದಾರಿಯ ಮೂಲಕ ಮಾಹಿತಿಯನ್ನು ಪಡೆದುಕೋ"[9] ಎಂದು ಅರ್ಥಕೊಡುವ ಒಂದು ಪರಿಚಿತವಾದ γινώσκω (*ginōskō*) ಎಂಬ ಪದವನ್ನು ಬಳಸಲಿಲ್ಲ; ಬದಲಾಗಿ, ಆತನು "ಅನುಭವದ ಮೂಲಕ ಅರ್ಥಮಾಡಿಕೋ" ಎಂಬ ಅರ್ಥದ εἰδέναι (οἶδα, *oida* ಎಂಬದರಿಂದ ಬಂದಿರುವ *eidenai*) ಪದವನ್ನು ಬಳಸುತ್ತಾನೆ. ಕೊಲೊಸ್ಸೆಯವರು ಇಂಪಾದ ಸಂಭಾಷಣೆಯನ್ನು ಅಭ್ಯಾಸಮಾಡಿಕೊಂಡವರಾಗಿದ್ದ ಕಾರಣದಿಂದ **ಯಾರಾರಿಗೆ ಯಾವಾವ** ಅಂಗೀಕಾರವಾಗುವದೋ ಆ ವಿಧದಲ್ಲಿ **ಉತ್ತರಹೇಳುವದಕ್ಕೆ** ಕಲಿಯಬೇಕಿತ್ತು.

## ಅನ್ವಯಿಸುವಿಕೆ

### ಅಂತಿಮ ವ್ಯಾಖ್ಯೆಗಳು (4:2-6)

ಪೌಲನು ತನ್ನ ಪತ್ರಿಕೆಯನ್ನು ಮುಕ್ತಾಯಗೊಳಿಸುವವನಾಗಿ, ಕ್ರಿಸ್ತನನ್ನು ಹಿಂಬಾಲಿಸುವದರ ಪ್ರಾಮುಖ್ಯವಾದ ಅಂಶಗಳ ಬಗ್ಗೆ ಅಂತಿಮ ಸ್ಪರ್ಶಗಳನ್ನು ಕೊಡುತ್ತಾನೆ. ನಾವು (1) ಎಚ್ಚರವಾಗಿದ್ದು ಪ್ರಾರ್ಥಿಸಬೇಕು, (2) ಸೇವಾಕಾರ್ಯಗಳನ್ನು (ಮಿಶನ್) ಮಾಡುವವರಿಗಾಗಿ ಪ್ರಾರ್ಥನೆಗಳನ್ನು ಸೇರಿಸಿಕೊಳ್ಳಬೇಕು, (3) ಕ್ರೈಸ್ತೇತರರ ವಿಷಯದಲ್ಲಿ ಜ್ಞಾನವುಳ್ಳವರಾಗಿ ನಡೆದುಕೊಳ್ಳಬೇಕು, (4) ಯಾವಾಗಲೂ ಸಹಾಯಕವಾಗುವ ಸಂಭಾಷಣೆಯನ್ನು ಬಳಸಬೇಕು.

*ನಿಷ್ಠೆಯಿಂದ ಮಾಡುವ ಪ್ರಾರ್ಥನೆಯಲ್ಲಿ ಎಚ್ಚರವಾಗಿರಿ.* ಪೌಲನು ತನ್ನ ಎಲ್ಲಾ ಪತ್ರಿಕೆಗಳಲ್ಲಿಯೂ ಪ್ರಾರ್ಥನೆಗೆ ಆದ್ಯತೆಯನ್ನು ಕೊಟ್ಟ ಪ್ರಕಾರವಾಗಿಯೇ, ನಾವು ಸಹ ಪ್ರಾರ್ಥನೆಗೆ ಆದ್ಯತೆಯನ್ನು ನೀಡತಕ್ಕದ್ದು. ಈ ಕ್ಲುಪ್ತ ಪತ್ರಿಕೆಯೊಳಗೆ ಐದು ಸಾರಿ, ಆರಂಭದಲ್ಲಿ ಮತ್ತು ಅಂತ್ಯದ ವೇಳೆಯಲ್ಲಿ, ಆತನು ಪ್ರಾರ್ಥನೆಯ ಕುರಿತು ಮಾತಾಡಿದನು (1:3, 9; 4:2, 3, 12).

ನಮ್ಮ ವೇಳಾಪಟ್ಟಿಯಲ್ಲೆಲ್ಲಾ ಎಷ್ಟೋ ಅಲ್ಪ ಪ್ರಾಮುಖ್ಯತೆಯುಳ್ಳ ಚಟುವಟಿಕೆಗಳು ತುಂಬಿದ್ದು ನಾವು ಪ್ರಾರ್ಥನೆಗೆ ಸಮಯವನ್ನು ಮಾಡಿಕೊಳ್ಳಲು ವಿಫಲರಾಗುತ್ತೇವೆ. ಇಂದಿನ ಕಾಲದ ಜನರ ಜೀವಿತಗಳ ಹಾಗೆ ಮೊದಲ ಶತಮಾನದಲ್ಲಿದ್ದ ಜನರ ಜೀವಿತಗಳು ವಿಧವಿಧವಾದ ವ್ಯವಹಾರಗಳಲ್ಲಿ ಸಿಕ್ಕಿಕೊಂಡು ಅಸ್ತವ್ಯಸ್ತಗೊಂಡಿರಲಿಲ್ಲ. ಬಹುಶಃ ಈ ಆದಿ

ಕ್ರೈಸ್ತರಿಗೆ ಪ್ರಾರ್ಥಿಸುವದಕ್ಕೆ ಹೆಚ್ಚು ಸಮಯವಿರುತ್ತಿತ್ತು, ಆದರೆ ಅವರಿಗೆ ಆಗಲೂ ಪ್ರಾರ್ಥನೆಗಾಗಿ ಅರ್ಪಿಸಿಕೊಳ್ಳುವಂತೆ ಪ್ರೋತ್ಸಾಹಿಸುವ ಅಗತ್ಯವಿತ್ತು.

ಅರ್ಪಿಸಿಕೊಳ್ಳುವದು ಅಂದರೆ ಒಂದು ಕೆಲಸ ಅಥವಾ ಅಭ್ಯಾಸಕ್ಕಾಗಿ ಸಮಯ ಮತ್ತು ಪರಿಶ್ರಮವನ್ನು ಮೀಸಲಾಗಿಡುವದು ಎಂದಾಗಿದೆ. ನಾವು ಕ್ರೀಡಾ ತಂಡಗಳಿಗೆ, ಟಿವಿ ಕಾರ್ಯಕ್ರಮಗಳಿಗೆ, ಮತ್ತು ವಿನೋದದ ಚಟುವಟಿಕೆಗಳಿಗೆ ಅರ್ಪಿಸಿಕೊಂಡವರಾಗಿರ ಬಲ್ಲೆವು. ಇವುಗಳ ಬೆನ್ನತ್ತಿ ದಿನವನ್ನೆಲ್ಲಾ ಕಳೆದ ಬಳಿಕ, ಪ್ರಾಮುಖ್ಯವಾದ ಏನನ್ನೂ ಸಾಧಿಸಿದಂತಾಗುವದಿಲ್ಲ.

ನಮ್ಮಲ್ಲಿ ಅನೇಕರಿಗೆ ಇರುವ ಸಮಸ್ಯೆಯೆಂದರೆ ನಾವು ಪ್ರಾರ್ಥಿಸುವದಕ್ಕೆ ಸಿಕ್ಕುವ ಅವಕಾಶಗಳನ್ನು ತುಳಿದು ಹಾಕುವವರಾಗಿ, ದೇವರೊಂದಿಗೆ ಸಂವಹನ ಮಾಡುವದರಿಂದ ನಮ್ಮನ್ನು ತಡೆಯುವಂತೆ ಗಮನಭಂಗ ಮಾಡುವ ಕಾರ್ಯಗಳಿಗೆ ಅವಕಾಶ ಕೊಡುತ್ತೇವೆ. ಈ ವಿಘ್ನಗಳು ನಮ್ಮನ್ನು ದೇವರೊಂದಿಗೆ ಅಮೂಲ್ಯವಾದ ಕ್ಷಣಗಳನ್ನು ಕಳೆಯುವದರಿಂದ ತಡೆಯುವದಕ್ಕೆ ಸೈತಾನನಿಂದ ಬಂದವುಗಳಾಗಿರಬಲ್ಲವು. ಪ್ರಾರ್ಥಿಸುವದಕ್ಕೆ ಸಿಕ್ಕ ಅವಕಾಶಗಳಿಂದ ನಮ್ಮನ್ನು ವಂಚಿತರನ್ನಾಗಿ ಮಾಡುವ ಆ ಕಾರ್ಯಗಳು ನಾವು ಪಕ್ಕಕ್ಕೆ ಎತ್ತಿಡಬೇಕಾದ ಅಡಚಣೆಗಳಾಗಿರುತ್ತವೆ (ಇಬ್ರಿಯ 12:1).

ನಾವು ಎಚ್ಚರದಲ್ಲಿಯೇ ಇರಬೇಕು ಯಾಕೆಂದರೆ ಸೈತಾನನು ನಮಗೆ ಅಡ್ಡಿಗಳನ್ನುಂಟು ಮಾಡಲು ಹುಡುಕುತ್ತಿರುತ್ತಾನೆ (1 ಪೇತ್ರ 5:8). ಆತನು ಶೋಧನೆಗಳಿಗೆ ನಮ್ಮಲ್ಲಿ ಒಬ್ಬನೂ ಹೊರತಾದವನಾಗಿರುವದಿಲ್ಲ. ಆತನು ಯೇಸುವನ್ನು ಶೋಧಿಸಿದನು (ಮತ್ತಾಯ 4:1) ಮತ್ತು ಪೇತ್ರನನ್ನು ಗೋದಿಯಂತೆ ಒನೆಯಬೇಕೆಂದು ಅಪ್ಪಣೆ ಕೇಳಿಕೊಂಡನು (ಲೂಕ 22:31). ಯೇಸು ತೋಟದಲ್ಲಿ ಪೇತ್ರ, ಯಾಕೋಬ, ಮತ್ತು ಯೋಹಾನರಿಗೆ, "ಶೋಧನೆಗೆ ಒಳಗಾಗದಂತೆ ಎಚ್ಚರವಾಗಿದ್ದು ಪ್ರಾರ್ಥಿಸಿರಿ" ಎಂದು ಹೇಳಿದನು (ಮತ್ತಾಯ 26:41).

*ಮಿಶನರಿಗಳಿಗಾಗಿ ಪ್ರಾರ್ಥಿಸಿರಿ.* ಪೌಲನು ತನಗೋಸ್ಕರ ಪ್ರಾರ್ಥಿಸುವಂತೆ ಕೇಳಿಕೊಂಡನು. ಆತನು ಯಾವದಕ್ಕೋಸ್ಕರ ಕೇಳಲಿಲ್ಲವೋ ಅದು ಆತನು ಏನನ್ನು ಬೇಡಿಕೊಂಡನೋ ಅದರಷ್ಟೇ ಪ್ರಾಮುಖ್ಯವಾಗಿರುತ್ತದೆ. ಆತನು ನಮಗೆ ಹಣ, ಸ್ವೀಕರಿಸುವ ಹೃದಯಗಳು, ಅನೇಕ ಪ್ರತಿಸ್ಪಂದನಗಳು ಮತ್ತು ಪರಿವರ್ತನೆಗೊಳ್ಳು ವವರು, ಒಂದು ಸುಲಭವಾದ ಕಾರ್ಯಯೋಜನೆಗಳ ಪಟ್ಟಿ, ಕಷ್ಟಗಳಿಂದ ವಿಮುಕ್ತಿ, ಆರಾಮದಾಯಕ ವಾಸಸ್ಥಳಗಳು, ಐಶ್ವರ್ಯವಂತರ ಮತ್ತು ಪ್ರಖ್ಯಾತರ ವಿಧೇಯತೆ, ಬೃಹತ್ ಮತ್ತು ಗೌರವಾನ್ವಿತ ಸಭೆಗಳು, ಅಥವಾ ಇತರ ಯಾವದೇ ಶಾರೀರಿಕ ಅನುಕೂಲತೆಗಳು ಸಿಕ್ಕುವಂತೆ ಪ್ರಾರ್ಥಿಸಬೇಕೆಂದು ಆತನು ಸಹೋದರರನ್ನು ಕೇಳಿಕೊಳ್ಳಲಿಲ್ಲ. ವಾಕ್ಯವನ್ನು ಸಾರುವದಕ್ಕೆ ಒಂದು ತೆರೆದ ಬಾಗಲು, ಕ್ರಿಸ್ತನ ಮರ್ಮವನ್ನು ಹಂಚಿಕೊಳ್ಳಲು ಒಂದು ಸದವಕಾಶವು ಸಿಕ್ಕಲಿ, ಮತ್ತು ತಾನು ಅರ್ಥವಾಗುವ ರೀತಿಯಲ್ಲಿ ಮಾತಾಡುವಂತಾಗುವ ಹಾಗೆ ಪ್ರಾರ್ಥಿಸಬೇಕೆಂದು ಆತನು ಕೊಲೊಸ್ಸೆಯವರನ್ನು ಕೇಳಿಕೊಂಡನು. ನಾವು ಮಿಶನರಿಗಳಿಗೋಸ್ಕರ ಪ್ರಾರ್ಥಿಸುವ ವೇಳೆ, ಆತನ ಈ ಮನವಿಯು ನಮಗೊಂದು ಉದಾಹರಣೆಯಾಗಿ ಉಪಯೋಗಕ್ಕೆ ಬರುವದು.

"ತೆರೆದ ಬಾಗಲು" ಎಂದು ಹೇಳುವ ಮೂಲಕ, ಆತನ ತಾತ್ಪರ್ಯವು ವಾಕ್ಯವನ್ನು ಸಾರಲು ಒಂದು ಸಂದರ್ಭವು ಸಿಕ್ಕಲಿ ಎಂದಾಗಿತ್ತು. ಪೌಲನು ತನ್ನ ಮೊದಲ ಸುವಾರ್ತಾ

ಪ್ರಯಾಣದಿಂದ ಹಿಂದಿರುಗಿದಾಗ, ಕರ್ತನು "ಅನ್ಯಜನರಿಗೆ ನಂಬಿಕೆಯ ಬಾಗಿಲನ್ನು ತೆರೆದನು" ಎಂಬದಾಗಿ ಆತನು ವರದಿ ನೀಡಿದನು (ಅಪೊಸ್ತಲರ ಕೃತ್ಯಗಳು 14:27). ಆತನು ಕೊರಿಂಥದವರಿಗೆ ಬರೆಯುವ ವೇಳೆ ಇದೇ ರೂಪಕವನ್ನು ಬಳಸಿದನು. ಆತನು ಅವರಿಗೆ ತಾನು ಎಫೆಸದಲ್ಲಿರುವ ವೇಳೆ (1 ಕೊರಿಂಥ 16:9) ಮತ್ತು ತ್ರೋವದಲ್ಲಿರುವ ವೇಳೆ (2 ಕೊರಿಂಥ 2:12) ಒಂದು "ಬಾಗಿಲು" ತೆರೆಯಲ್ಪಟ್ಟಿತೆಂದು ಎಂದು ಆತನು ಪ್ರಸ್ತಾಪಿಸುತ್ತಾನೆ.

ಹೇಳುವದಾದರೆ, ಆತನ ಸುವಾರ್ತಾ ಪ್ರಯಾಣಗಳ ವೇಳೆಯಲ್ಲಿ, ಪೌಲನು ಕೆಲವೊಂದು ಸ್ಥಳಗಳಲ್ಲಿ ಮಾತಾಡುವದಕ್ಕೆ ಸಾಧ್ಯವಾಗದಂತೆ ಬಾಗಿಲುಗಳು ಮುಚ್ಚಲ್ಪಟ್ಟವು (ಅಪೊಸ್ತಲರ ಕೃತ್ಯಗಳು 13:50; 17:5-10, 13). ಆತನು "ಅನ್ಯಜನರಿಗೆ ರಕ್ಷಣೆಯಾಗುವಂತೆ ಸುವಾರ್ತೆಯನ್ನು ಹೇಳುವ ನಮಗೆ ಅಡ್ಡಿಮಾಡುತ್ತಾರೆ" ಎಂದು ಯೆಹೂದ್ಯರ ಬಗ್ಗೆ ಬರೆದನು (1 ಥೆಸಲೋನಿಕ 2:16). ತಾನು ಈ ವಿಧದಲ್ಲಿ ಅಡ್ಡಿ ಮಾಡಲ್ಪಡದೆ ವಾಕ್ಯವನ್ನು ಸಾರುವದಕ್ಕೆ ಸ್ವಾತಂತ್ರ ಸಿಕ್ಕುವದನ್ನು ಪೌಲನು ಬಯಸಿದನು.

*ಕ್ರೈಸ್ತೇತರರ ವಿಷಯದಲ್ಲಿ ಸಮರ್ಪಕವಾಗಿ ನಡೆದುಕೊಳ್ಳಿರಿ.* ಕ್ರೈಸ್ತರಾಗಿ ನಮಗಿರುವ ಅತ್ಯಂಥ ದೊಡ್ಡ ಬಲವು ಕ್ರಿಸ್ತನಂತಹ ಜೀವಿತಗಳನ್ನು ನಡಿಸುವದರಿಂದಲೇ ಬರುತ್ತದೆ. ನಾವು ಭೂಮಿಗೆ ಉಪ್ಪಾಗಿದ್ದೇವೆ (ಮತ್ತಾಯ 5:13), ಲೋಕಕ್ಕೆ ಬೆಳಕಾಗಿದ್ದೇವೆ, ಗುಡ್ಡದ ಮೇಲೆ ಕಟ್ಟಿರುವ ಊರಾಗಿದ್ದೇವೆ (ಮತ್ತಾಯ 5:14), ನಮ್ಮ ಸುತ್ತಲಿನವರು ಓದುವಂತಹ ಒಂದು ಪತ್ರವಾಗಿದ್ದೇವೆ (2 ಕೊರಿಂಥ 3:2). ನಮ್ಮ ಜೀವಿತಗಳಿಂದ ಮತ್ತು ಒಬ್ಬರಿಗೊಬ್ಬರು ಹೊಂದಿರುವ ಪ್ರೀತಿಯಿಂದ, ನಾವು ಯೇಸುವಿನ ಹಿಂಬಾಲಕರು ಎಂಬುದನ್ನು ಎಲ್ಲಾ ಜನರಿಗೆ ತೋರಿಸಿ ಕೊಡುವವರಾಗಿದ್ದೇವೆ.

ನಾವು ಅನುಸರಿಸತಕ್ಕಂಥ ಒಂದು ಬುದ್ಧಿವಾದವನ್ನು ಪೌಲನು ಫಿಲಿಪ್ಪಿಯವರಿಗೆ ಕೊಟ್ಟಿರುತ್ತಾನೆ:

> ಗುಣಗುಟ್ಟದೆಯೂ ವಿವಾದವಿಲ್ಲದೆಯೂ ಎಲ್ಲವನ್ನು ಮಾಡಿರಿ. ಹೀಗೆ ನೀವು ನಿರ್ದೋಷಿಗಳೂ ಯಥಾರ್ಥಮನಸ್ಸುಳ್ಳವರೂ ಆಗಿದ್ದು ವಕ್ರಬುದ್ಧಿಯುಳ್ಳ ಮೂರ್ಖಜಾತಿಯ ಮಧ್ಯದಲ್ಲಿ ದೇವರ ನಿಷ್ಕಳಂಕರಾದ ಮಕ್ಕಳಾಗಿರುವಿರಿ. ಇವರೊಳಗೆ ನೀವು ಸರ್ವರಿಗೂ ಜೀವದಾಯಕ ವಾಕ್ಯವನ್ನು ತೋರಿಸಿಕೊಡುವವರಾಗಿದ್ದು ಲೋಕದೊಳಗೆ ಹೊಳೆಯುವ ಜ್ಯೋತಿರ್ಮಂಡಲಗಳಂತೆ ಕಾಣಿಸುವವರಾಗಿದ್ದೀರಲ್ಲಾ (ಫಿಲಿಪ್ಪಿ 2:14-16).

*ಕೇಳುವವರಿಗೆ ನಮ್ಮ ಸಂಭಾಷಣೆಯು ಸಹಾಯಕರವಾಗಿರುವಂತೆ ಜಾಗ್ರತೆ ವಹಿಸಿರಿ.* ಉಪ್ಪು ಆಹಾರದ ರುಚಿಯನ್ನು ಹೆಚ್ಚಿಸುವ ರೀತಿಯಲ್ಲಿಯೇ, ನಾವು ಹೇಳುವದನ್ನು ಯಾವ ರೀತಿ ಹೇಳುತ್ತೇವೆ ಎಂಬುದು ಪ್ರಾಮುಖ್ಯವಾಗಿರುತ್ತದೆ. ನಾವು ಪ್ರೀತಿಯಲ್ಲಿ ಸತ್ಯವನ್ನು ಹೇಳಬೇಕಾಗಿರುತ್ತದೆ (ಎಫೆಸ 4:15, 25) ಮತ್ತು ಸೊಲೊಮೋನನ ಜ್ಞಾನದ ಬುದ್ಧಿವಾದಕ್ಕೆ ಕಿವಿಗೊಡಬೇಕು: "ಮೃದುವಾದ ಪ್ರತ್ಯುತ್ತರವು ಸಿಟ್ಟನ್ನಾರಿಸುವದು; ಬಿರುನುಡಿಯು ಸಿಟ್ಟನ್ನೇರಿಸುವದು" (ಜ್ಞಾನೋಕ್ತಿ 15:1).

ನಾವು ಏನು ನಂಬುತ್ತೇವೆಂಬದನ್ನು ಪ್ರಶ್ನಿಸುವವರಿಗೆ ಉತ್ತರ ಹೇಳುವದಕ್ಕೆ ನಾವು ಸಿದ್ಧರಿರಬೇಕು. ನಮ್ಮ ಉತ್ತರಗಳನ್ನು "ಸಾತ್ವಿಕತ್ವದಿಂದಲೂ ಮನೋಭೀತಿಯಿಂದಲೂ"

ಕೊಡತಕ್ಕದ್ದು (1 ಪೇತ್ರ 3:15). ಪೌಲನು ಎಫೆಸದವರಿಗೆ ಹೀಗೆ ಬರೆದನು, "ನಿಮ್ಮ ಬಾಯೊಳಗಿಂದ ಯಾವ ಕೆಟ್ಟ ಮಾತೂ ಹೊರಡಬಾರದು; ಭಕ್ತಿಯನ್ನು ವೃದ್ಧಿಮಾಡುವಂಥ ಕಾಲೋಚಿತವಾದ ಮಾತು ಇದ್ದರೆ ಕೇಳುವವರ ಹಿತಕ್ಕಾಗಿ ಅದನ್ನು ಆಡಿರಿ" (ಎಫೆಸ 4:29).

ಕ್ರೈಸ್ತರಾಗಿ ನಾವು ಪ್ರಾರ್ಥನೆಯ ಕಡೆಗೆ ಮತ್ತು ನಾವು ಹೇಗೆ ಜೀವಿಸಬೇಕೆಂದು ಕ್ರಿಸ್ತನು ಇಚ್ಛಿಸುವನೋ ಆ ವಿಧದಲ್ಲಿ ಜೀವಿಸುವದರ ಕಡೆಗೆ ಗಮನವನ್ನು ಹರಿಸತಕ್ಕದ್ದು.

## ಜ್ಯೋತಿರ್ಮಂಡಲಗಳಂತೆ ಜೀವಿಸಿರಿ (4:5, 6)

*ನಾಶನದಲ್ಲಿರುವವರ ವಿಷಯದಲ್ಲಿ ಕ್ರೈಸ್ತರು ಬುದ್ಧಿವಂತರಾಗಿ ನಡೆದುಕೊಳ್ಳತಕ್ಕದ್ದು* (ವ. 5). ನಾವು ಕತ್ತಲೆಯಿಂದ ತುಂಬಿರುವ ಒಂದು ಲೋಕದಲ್ಲಿ ಜ್ಯೋತಿರ್ಮಂಡಲಗಳಾಗಿರಬೇಕು (ಫಿಲಿಪ್ಪಿ 2:14-16). ನಾಶನದಲ್ಲಿರುವವರು ಕ್ರೈಸ್ತರ ಜೀವಿತಗಳನ್ನು ಗಮನಿಸುವವರಾಗಿ ಯೇಸುವಿನ ಮಾರ್ಗಗಳನ್ನು ಕಲಿತುಕೊಳ್ಳಬಲ್ಲರು: ವ್ಯಾಪಾರದ ವಹಿವಾಟುಗಳಲ್ಲಿ ನ್ಯಾಯವಾಗಿರುವದು, ದಯೆಯಿಲ್ಲದೆ ವರ್ತಿಸುವವರ ಕಡೆಗೆ ಸೌಜನ್ಯದಿಂದಿರುವದು, ಕಷ್ಟದಲ್ಲಿರುವವರಿಗೆ ಸಹಾಯಕರಾಗಿರುವದು, ಸಂಭಾಷಣೆಯಲ್ಲಿ ಜಾಗ್ರತೆಯಿಂದಿರುವದು, ನಿರ್ಮಲ ಹೃದಯವುಳ್ಳವರಾಗಿರುವದು, ಮತ್ತು ನಾವು ಮಾಡುವ ಎಲ್ಲದರಲ್ಲಿಯೂ ಕ್ರಿಸ್ತನಂತಿರುವದು (ನೋಡಿರಿ ಮತ್ತಾಯ 5:13-16).

ಕ್ರೈಸ್ತರು ಸಿಕ್ಕುವ ಎಲ್ಲಾ ಸದವಕಾಶಗಳನ್ನು ಬಳಸಿಕೊಳ್ಳಬೇಕು (ವ. 5). ನಾವು ಬೇರೆಯವರನ್ನು ಒಳ್ಳೇದಕ್ಕೆ ನಡಿಸುವಂತೆ ಅವರ ಮೇಲೆ ಪ್ರಭಾವವನ್ನು ಬೀರುವದಕ್ಕೆ ಸಿಕ್ಕುವ ಸದವಕಾಶಗಳನ್ನು ಅಸಡ್ಡೆ ಮಾಡದೆ ಇರುವದು ಮಾತ್ರವಲ್ಲದೆ, ನಾಶನದಲ್ಲಿರುವವರನ್ನು ಕ್ರಿಸ್ತನಿಗಾಗಿ ಸಂಪಾದಿಸಕೊಳ್ಳಲು ಅವರನ್ನು ಸಂಧಿಸುವದಕ್ಕೆ ಅವಕಾಶಗಳನ್ನು ಸಹ ಹುಡುಕಬೇಕು. ಪೌಲನು ಎಲ್ಲರನ್ನು ಕ್ರಿಸ್ತನಿಗೋಸ್ಕರ ಸಂಧಿಸುವದಕ್ಕೆ ಅವಕಾಶಗಳನ್ನು ಹುಡುಕಿದನು (ರೋಮಾ 1:13-15; 1 ಕೊರಿಂಥ 9:19-23; 10:33). ಯೆಹೂದ್ಯರು ತನ್ನನ್ನು ಕೊಲ್ಲಲು ಪ್ರಯತ್ನಿಸಿದ ಬಳಿಕ ಸಹ, ತಾನು ಗಾಯಗೊಂಡು ರಕ್ತವನ್ನು ಸುರಿಸಿಕೊಳ್ಳುತ್ತಾ, ಅವರನ್ನು ಕ್ರಿಸ್ತನಿಗಾಗಿ ಗೆಲ್ಲಬೇಕೆಂಬುದಕ್ಕಾಗಿ ಅವರೊಂದಿಗೆ ಮಾತಾಡಲು ಅಪ್ಪಣೆಯನ್ನು ಕೋರಿದನು (ಅಪೊಸ್ತಲರ ಕೃತ್ಯಗಳು 21:31, 36, 39).

*ಬೇರೆಯವರಿಗೆ ಪ್ರತ್ಯುತ್ತರ ನೀಡುವಾಗ ಕ್ರೈಸ್ತರು ಇಂಪಾದ ಸಂಭಾಷಣೆಯನ್ನು ಬಳಸಬೇಕು* (4:6). ಒಬ್ಬ ವ್ಯಕ್ತಿಯ ಸಂಭಾಷಣೆಯು ಆತನು ಹೃದಯದಲ್ಲಿ ಏನಾಗಿದ್ದನೆಂಬದರ ನಿಜಸ್ವರೂಪವನ್ನು ತಿಳಿಸುತ್ತದೆ ಮತ್ತು ಆತನ ಯೋಚನೆ ಏನಾಗಿದೆ ಎಂಬುದನ್ನು ಪ್ರಕಟಗೊಳಿಸುತ್ತದೆ (ಮತ್ತಾಯ 12:34; 15:18, 19). ಸೂಕ್ತವಾದ ಮಾತುಗಳನ್ನಾಡಬೇಕಾದರೆ, ಕ್ರೈಸ್ತರು ಮಾನ್ಯವಾದವುಗಳನ್ನು ಯೋಚಿಸುವವರಾಗಿರಬೇಕು (ಫಿಲಿಪ್ಪಿ 4:8). ಸದಭಿರುಚಿಯುಳ್ಳಂತ ಜ್ಞಾನದ ನುಡಿಗಳಿಗೆ ಪರಿಚಿತರಾಗಬೇಕು. ನಮ್ಮ ಮಾತುಗಳು ಪ್ರೀತಿಯ ಹೃದಯದೊಳಗಿಂದ ಬರುವದರಿಂದ ಕೇಳುವವರಿಗೆ ಅವುಗಳು ಆಕರ್ಷಕವಾಗುವವು (ಎಫೆಸ 4:15).

## ಅಡಿಟಿಪ್ಪಣಿಗಳು

[1]ರೋಮಾ 12:12; ಎಫೆಸ 6:18; ಫಿಲಿಪ್ಪಿ 4:6; ಕೊಲೊಸ್ಸೆ 4:2; 1 ಥೆಸಲೋನಿಕ 5:17. [2]ರೋಮಾ 15:30-32; 2 ಕೊರಿಂಥ 1:11; ಎಫೆಸ 6:19; ಕೊಲೊಸ್ಸೆ 4:3; 1 ಥೆಸಲೋನಿಕ 5:25; 2 ಥೆಸಲೋನಿಕ 3:1, 2; ಫಿಲೆಮೋನ 22. [3]ಸಹ ನೋಡಿರಿ ಪ್ರಕಟನೆ 3:2, 3; 16:15. [4]ನೋಡಿರಿ 2 ಕೊರಿಂಥ 1:11; ಎಫೆಸ 1:16; ಫಿಲಿಪ್ಪಿ 1:3; 4:6; 1 ಥೆಸಲೋನಿಕ 1:2; 5:17, 18; ಫಿಲೆಮೋನ 4. [5]ಈ ಪದದ ರೂಪಗಳು ಮತ್ತಾಯ 12:29; 13:30; 14:3; 16:19; 18:18; 21:2; 22:13; 27:2; ಅಪೊಸ್ತಲರ ಕೃತ್ಯಗಳು 9:2, 14, 21; 12:6; 20:22; 21:11, 13, 33; 22:5, 29; 24:27. [6]Peter T. O'Brien, *Colossians, Philemon,* Word Biblical Commentary, vol. 44ರಲ್ಲಿ ಕಾಣಿಸಿಕೊಳ್ಳುತ್ತವೆ (Waco, Tex.: Word Books, 1982), 240. [7]William Hendriksen, *Exposition of Colossians and Philemon,* New Testament Commentary (Grand Rapids, Mich.: Baker Book House, 1964), 182. [8]H. C. G. Moule, *The Epistles to the Colossians and to Philemon,* The Cambridge Bible for Schools and Colleges (Cambridge: University Press, 1893; reprint, 1902), 136. [9]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick William Danker (Chicago: University of Chicago Press, 2000), 200.